ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 52 ಡಿಸೆಂಬರ್ 28, 1980 ಬೆಲೆ : 50 ಪೈಸೆ

ಎನ್. ಎಸ್. ಒ. ಯಾರ ರಕ್ಷಣೆಗೆ?

ಕೇಂದ್ರಸರಕಾರ ಲೋಕಸಭಾಧಿವೇಶನ ಸೇರುವ ಕೆಲವೇ ದಿನಗಳ ಮುಂಚೆ ನ್ಯಾಶನಲ್ ಸೆಕ್ಯೂರಿಟಿ ಆರ್ಡಿನೆನ್ಸ್ ಎಂಬ ಸುಗ್ರೀವಾಜ್ಞೆಯನ್ನು ಹೊರಡಿಸಿತ್ತು. ಈ ಆಜ್ಞೆಯು ಪ್ರಜಾಪ್ರಭುತ್ವಕ್ಕೆ ತೀವ್ರ ವಿರೋಧವಾಗಿದ್ದುದಲ್ಲದೆ ಅದನ್ನು ಹೊರಡಿಸಿದ ಕ್ರಮವೂ ತೀರ ಖಂಡನೀಯವಾಗಿತ್ತು. ಅದೀಗ ಲೋಕಸಭೆಯಲ್ಲಿ ಇಂದಿರಾ ಕಾಂಗ್ರೆಸ್ಸಿನ ಬಹುಸಂಖ್ಯಾಬಲದಿಂದ ಅಂಗೀಕರಿಸಲ್ಪಟ್ಟು ಶಾಸನವಾಗಿದೆ. ಅದನ್ನು ಚರ್ಚಿಸುತ್ತಿರುವಾಗ ಈ ಮಸೂದೆಯು 'ಕರಾಳ'ವೆಂದೂ, 'ಪ್ರಜಾಪ್ರಭುತ್ವ ವಿರೋಧಿ'ಯೆಂದೂ, 'ವಿನಾಶಕಾರಕ'ವಾದುದೆಂದೂ ಎಲ್ಲ ವಿರೋಧ ಪಕ್ಷಗಳು ವ್ಯಕ್ತಪಡಿಸಿ ಅದನ್ನು ತಡೆಯಲು ಸರ್ವಪ್ರಯತ್ನ ನಡೆಸಿದರೂ ಆಳುವ ಪಕ್ಷ ಅದನ್ನೆಲ್ಲಾ ಕಡೆಗಣಿಸಿ ಅದಕ್ಕೆ ಅಂಗೀಕಾರ ಪಡೆಯಿತು.

ಈ ತುರ್ತುಶಾಸನವನ್ನು ಸಮರ್ಥನೆ ಮಾಡುತ್ತಾ ಛಿದ್ರಕಾರಿ ಶಕ್ತಿಗಳನ್ನೂ, ಕಾಳಸಂತೆಕೋರರನ್ನೂ ಎದುರಿಸಲು ಇದು ಅಗತ್ಯವೆಂದು ಎಲ್ಲ ಕಾಂಗ್ರೆಸ್ (ಐ) ನಾಯಕರೂ ಹೇಳುತ್ತಾ, ಇದರಿಂದ ವಿರೋಧ ಪಕ್ಷಗಳಿಗೆ ಯಾವ ಭಯಕ್ಕೂ ಕಾರಣವಿಲ್ಲವೆಂದು ಸಾರಿದರು. ಆದರೆ ತುರ್ತುಆಜ್ಞೆ ಹೊರಡಿಸಿದ ಕೂಡಲೇ ಅನೇಕ ವಿರೋಧಿ ನಾಯಕರನ್ನು

ಸಂಪಾದಕೀಯ

ಬಂಧಿಸಲಾಗಿದೆ. ಇದನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಅರ್ಜಿ ಹಾಕಲ್ಪಟ್ಟು ಅದು ವಿಚಾರಣೆಯಲ್ಲಿದೆ.

ಇದರ ದುರುಪಯೋಗ ಹೇಗೆ ಆಗುತ್ತದೆಂಬುದಕ್ಕೆ ಇತ್ತೀಚೆಗೆ ಪ್ರಕಟವಾದೊಂದು ಸುದ್ದಿಯೇ ನಿದರ್ಶನವಾಗಿದೆ. ಈ ವರದಿಯಂತೆ ಬೆಂಗಳೂರಿನ ಕೇಂದ್ರ ಸಾರ್ವಜನಿಕ ಕೈಗಾರಿಕೆಗಳ ಕಾರ್ಮಿಕರು 'ಭೆಲ್' ನಲ್ಲಿರುವ ಸಂಬಳವನ್ನು ತಮಗೂ ಹಿಂದಿನ ಒಪ್ಪಂದದನ್ವಯ ಜಾರಿಗೆ ತರಬೇಕೆಂದು ಒತ್ತಾಯಮಾಡುತ್ತಾ ಇದೇ ತಾ. 26ರಿಂದ ಮುಷ್ಕರಕ್ಕೆ ತಯಾರು ನಡೆಸುತ್ತಿರುವಾಗ ಈ ಕೈಗಾರಿಕೆಗಳಲ್ಲಿ 'ಅಶಾಂತಿ' ಹಬ್ಬುವವರನ್ನು ಬಂಧಿಸಲು ಅವರ ಪಟ್ಟಿ ತಯಾರಿಸಲಾಗುತ್ತದೆಂಬ ವಿಷಯ ಎಲ್ಲರನ್ನೂ ಚಕಿತಗೊಳಿಸಿದೆ. ಈ ಕಾನೂನಿನ ಉದ್ದೇಶವೇನೆಂಬುದು ಇದರಿಂದ ಸ್ಪಷ್ಟವಾಗಿದೆ. ಈ ಶಾಸನವು ಬೆಳೆಯುತ್ತಿರುವ ಪ್ರಜಾಪ್ರಭುತ್ವ ಹೋರಾಟವನ್ನು ಸದೆಬಡಿಯುವುದಾಗಿದೆ. ರೈತ-ಕಾರ್ಮಿಕರ ಸಂಘಟನೆಯನ್ನು ಮುರಿದು ಮಾಲೀಕರ, ಜಮೀನ್ದಾರರ ಲಾಭ ರಕ್ಷಣೆ ಮಾಡುವುದಾಗಿದೆ.

ಈ ದುಷ್ಟ ಶಾಸನವನ್ನು ಎಲ್ಲ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳೂ, ಪಕ್ಷಗಳೂ ತೀವ್ರವಾಗಿ ಎದುರಿಸಬೇಕೆಂದು ನಾವು ವಿನಂತಿಸುತ್ತೇವೆ. ○

ಮಹಿಳೆಯರ ಮೇಲೆ ನಡೆದ ದೌರ್ಜನ್ಯ ಖಂಡನೆ

ಕಳೆದ ನವೆಂಬರ್ 26ರಂದು ಬೆಲೆ ಏರಿಕೆಯನ್ನು ವಿರೋಧಿಸಿ ಮಹಿಳೆಯರು ಹುಬ್ಬಳ್ಳಿಯ ತಹಸೀಲ್ದಾರರ ಕಚೇರಿ ಎದುರು ಮತಪ್ರದರ್ಶನ ನಡೆಸುತ್ತಿದ್ದಾಗ, ಹಠಾತ್ತಾಗಿ ಲಾಠೀ ಚಾರ್ಜ್ ನಡೆಸಿ ಅಶ್ರುವಾಯು ಪ್ರಯೋಗಿಸಲಾಗಿತ್ತು. ತಹಸೀಲ್ದಾರ್ ಹೊರಗೆ ಬಂದು ಮನವಿ ಸ್ವೀಕರಿಸಲಿಲ್ಲ. ದೂರು ಕೊಡಲು ಬಂದವರ ಮೇಲೆ ಹಲ್ಲೆ ನಡೆಸಲಾಗಿತ್ತು. ಮಕ್ಕಳನ್ನು ಎತ್ತಿಕೊಂಡು ಬಂದ ತಾಯಂದಿರನ್ನು ಥಳಿಸಲಾಗಿತ್ತು. ಸಮಸ್ತ ಜನತೆ ಈ ಅಮಾನುಷ ಘಟನೆಯನ್ನು ಖಂಡಿಸಿದ್ದರೂ ಈ ಕುಕೃತ್ಯಕ್ಕೆ ಕಾರಣರಾದವರ ಮೇಲೆ ಕ್ರಮಕೈಗೊಂಡಿರಲಿಲ್ಲ.

ಈ ಹಿನ್ನೆಲೆಯಲ್ಲಿ ವಿರೋಧಿ ಪಕ್ಷಗಳು ಸಭೆಸೇರಿ ಐಕ್ಯ ಪ್ರತಿಭಟನೆ, ಹೋರಾಟ ಕೈಗೊಳ್ಳಲು ತೀರ್ಮಾನಿಸಿದವು. ಡಿಸೆಂಬರ್ 19,20 ರಂದು ಜಿಲ್ಲಾಧಿಕಾರಿ ಕಚೇರಿ ಎದುರು ವಿರೋಧಿಪಕ್ಷಗಳ ಧುರೀಣರು, ಕಾರ್ಮಿಕಸಂಘಗಳ ನಾಯಕರು, ವಿದ್ಯಾರ್ಥಿ ಧುರೀಣರು, ಬಂಡಾಯ ಸಾಹಿತ್ಯ ಸಂಘಟನೆಯ ಕಾರ್ಯಕರ್ತರು ಸಾಮೂಹಿಕ ಧರಣಿ ಸತ್ಯಾಗ್ರಹ ಕೈಗೊಂಡರು. ಈ ಕಾರ್ಯಕ್ರಮದ ಮೊದಲು ಮೆರವಣಿಗೆ ತೆಗೆದು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ದಿನಾಂಕ 20ರ ಸಂಜೆ ಬಹಿರಂಗ ಸಭೆ ನಡೆಸಲಾಯಿತು. ಈ ಸಭೆಯನ್ನು ಉದ್ದೇಶಿಸಿ ಸಿ.ಪಿ.ಐ (ಎಂ)ನ ಕಾಂ. ಹಳಕಟ್ಟಿ, ಸಿ ಪಿ ಐ.ನ ಕಾಮ್ರೇಡ್ ಮುಧೋಳ, ಕಾಂಗ್ರೆಸ್(ಯು)ನ ಶ್ರೀ ಅಗ್ನಿಹೋತ್ರಿ ಮತ್ತು ಹೊರಟ್ಟಿ, ಲೋಕದಳದ ಶ್ರೀ ರಾಚಪ್ಪ ಹಡಪದ, ಜನತಾ ಪಕ್ಷದ ಶ್ರೀ ಉಮಾದಿ ಮಾತನಾಡಿದರು. ಕಾಂಗ್ರೆಸ್(ಯು) ಅಧ್ಯಕ್ಷ ಶ್ರೀ ದೇವರಾಜ್ ಅರಸರು ಈ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ದೌರ್ಜನ್ಯವೆಸಗಿದ ವ್ಯಕ್ತಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವಂತೆ ಧುರೀಣರೆಲ್ಲರೂ ಒತ್ತಾಯಿಸಿದರು. ಇದೇ ಸಂದರ್ಭದಲ್ಲಿ ರಾಜ್ಯದ ನಾನಾಕಡೆ, ದೇಶದ ವಿವಿಧ ಕಡೆ ನಡೆಯುತ್ತಿರುವ ರೈತ ಹೋರಾಟಗಳನ್ನು ಬೆಂಬಲಿಸಲಾಯಿತು.

ಉತ್ತರ ಕರ್ನಾಟಕದ ಪ್ರಮುಖ ಪಟ್ಟಣವಾದ ಹುಬ್ಬಳ್ಳಿಯಲ್ಲಿ ಮೊದಲ ಬಾರಿಗೆ ವಿರೋಧಿ ಪಕ್ಷಗಳು ಒಟ್ಟಿಗೆ ಕಾರ್ಯಾಚರಣೆಗೆ ಇಳಿದದ್ದು ಸ್ವಾಗತಾರ್ಹ ಬೆಳವಣಿಗೆ. ●

ಬಲಿಷ್ಟ ಸಂಘಟನೆಗೆ ಪ್ಲೀನಮ್ ನಾಂದಿಯಾಗಲಿ

ಡಿಸೆಂಬರ್ 24ರಿಂದ 28ರವರೆಗೆ ಮೈಸೂರಿನಲ್ಲಿ ನಡೆಯುತ್ತಿರುವ ರಾಜ್ಯ ಮಟ್ಟದ ಪ್ಲೀನಮ್ ಉದ್ಘಾಟನೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರಧಾನಕಾರ್ಯದರ್ಶಿ ಕಾಂ. ಇ ಎಂ ಎಸ್. ನಂಬೂದಿರಿಪಾದ್‌ರು ನೆರವೇರಿಸಿದರು. ಪ್ಲೀನಮ್‌ಗೆ ರಾಜ್ಯದ 17 ಜಿಲ್ಲೆಗಳಿಂದ ಪ್ರತಿನಿಧಿಗಳು ಆಗಮಿಸಿದ್ದಾರೆ.

ಮೈಸೂರು ನಗರ ಪುರಭವನದಲ್ಲಿ 24ರ ಸಂಜೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಕಾಂ. ಇ.ಎಂ.ಎಸ್.ರು 78 ಏಪ್ರಿಲ್‌ನಲ್ಲಿ ಸಾಲ್ಕಿಯಾದಲ್ಲಿ ನಡೆದ ಅಖಿಲಭಾರತ ಮಟ್ಟದ ಪ್ಲೀನಮ್‌ನ ನಿರ್ಣಯಕ್ಕನುಗುಣವಾಗಿ ದೇಶಾದ್ಯಂತ ಪಕ್ಷವನ್ನು ಬಲಿಷ್ಟವಾಗಿ ಸಂಘಟಿಸಲು ನಡೆಸುತ್ತಿರುವ ಪ್ರಯತ್ನಗಳ ಬಗ್ಗೆ ವಿವರಿಸಿದರು.

"ಪಕ್ಷದ ಸಂಘಟನೆ ಕ್ಷೀಣವಾಗಿರುವ ಕರ್ನಾಟಕ, ತಮಿಳುನಾಡು, ಒರಿಸ್ಸಾ ಮತ್ತಿತರ ಕಡೆ ಸಂಘಟನೆಯನ್ನು ಬಲಿಷ್ಟಪಡಿಸಲು ಕ್ರಮಕೈಗೊಳ್ಳುವುದರ ಜೊತೆಗೆ ಸಂಘಟನೆ ಬಲಿಷ್ಟವಾಗಿರುವ ಕಡೆಗಳಲ್ಲಿ ಸಂಘಟನೆಯನ್ನು ಚುರುಕುಗೊಳಿಸುವುದು, ಶಿಸ್ತುಬದ್ಧವಾದ, ಕೇಂದ್ರೀಕೃತ ಪ್ರಜಾಪ್ರಭುತ್ವ ತತ್ವವನ್ನೊಳಗೊಂಡ ಸಂಘಟನೆಯ ಅಗತ್ಯತೆಯ ಬಗ್ಗೆ ಒತ್ತಿ ಹೇಳಿದರು.

ದೇಶದ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸಿದ ಕಾಂ. ಇ.ಎಂ.ಎಸ್.ರು ದೇಶದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ವೃದ್ಧಿಯಾಗುತ್ತಿರುವುದನ್ನು, ಕಾಂಗ್ರೆಸ್ ಮತ್ತಿತರ ಬಂಡವಾಳಶಾಹಿ-ಭೂಮಾಲೀಕವರ್ಗಗಳ ಪಕ್ಷಗಳು ಕ್ಷೀಣಿಸುತ್ತಿರುವುದು ನಿಚ್ಚಳವಾಗಿ ಕಂಡುಬರುತ್ತಿದೆ ಎಂದರು. "ಸ್ವಂತ ನಿಲುಮೆಯಿಲ್ಲದ ಕಾಂಗ್ರೆಸ್ ಧುರೀಣರು ಸಂಜಯ ನಿಧನಾನಂತರ ಮೇನಕಾರನ್ನು ಮಹಾನಾಯಕಿಯನ್ನಾಗಿ ಪ್ರತಿಷ್ಠಾಪಿಸುವುದಕ್ಕೆ ಅನೇಕ ಮನವಿಗಳನ್ನು ತಮ್ಮ ಅಧಿನಾಯಕಿಗೆ ಸಲ್ಲಿಸಿದ್ದರು. ಇಂದಿರಾರಿಗೆ ಮೇನಕಾ ಬಗ್ಗೆ ಹೆಚ್ಚು ಆಸಕ್ತಿಯಿಲ್ಲವೆಂದು ತಿಳಿದುಬಂದ ನಂತರ ರಾಜೀವಗಾಂಧೀ ಹೆಸರನ್ನು ಜಪಿಸಲಾರಂಭಿಸಿದರು." "ಇಂದಿರಾ, ಮೇನಕಾರ ನಡುವೆ ಸಾಕಷ್ಟು ಅಂತಃಕಲಹಗಳಿದ್ದು ಇವು ದೆಹಲಿಯಲ್ಲಿ ಸಾಕಷ್ಟು ಊಹಾಪೋಹಗಳಿಗೆ ಎಡೆಕೊಟ್ಟಿದೆ" ಎಂದು ತಿಳಿಸಿದರು. ಕಾಂಗ್ರೆಸ್‌ನ ಗುಂಪು ರಾಜಕೀಯವನ್ನು ಪ್ರಸ್ತಾಪಿಸುತ್ತಾ ಆಂಧ್ರದ ಚೆನ್ನಾರೆಡ್ಡಿಯವರ ವಿಷಯ ಉದಾಹರಿಸುತ್ತಾ ಕಮ್ಯುನಿಸ್ಟೇತರ ಎಲ್ಲ ರಾಜಕೀಯ ಪಕ್ಷಗಳಲ್ಲೂ ಗುಂಪುಗಾರಿಕೆ ಸಾಮಾನ್ಯ ಎಂದರು.

ಇ. ಎಂ. ಎಸ್.

ರಾಜಕೀಯವಾಗಿ ಸಮಾನವೇದಿಕೆ ಹೊಂದದೆಯೂ ಬೆಲೆಏರಿಕೆ, ರೈತರ ಸಮಸ್ಯೆ ಮುಂತಾದ ವಿಷಯಗಳಿಗೆ ವಿರೋಧ ಪಕ್ಷಗಳು ಜಂಟಿಯಾಗಿ ಹೋರಾಡಲು ಸಾಧ್ಯ, ಎಂದು ತಿಳಿಸುತ್ತಾ ಮಹಾರಾಷ್ಟ್ರದ ರೈತಚಳುವಳಿಯನ್ನು ಉದಾಹರಿಸಿದರು. ಇಂಥವೇ ಪ್ರಯತ್ನಗಳು ಆಂಧ್ರ, ಬಿಹಾರ ರಾಜ್ಯಗಳಲ್ಲೂ ನಡೆಯುತ್ತಿವೆ ಎಂದರು. "ಬೆಳೆದು ಬರುತ್ತಿರುವ ಹೋರಾಟಗಳು ರಾಜಕೀಯ ಪಕ್ಷಗಳ ಅಸ್ತಿತ್ವವನ್ನೇ ಅಲ್ಲಗಳೆಯುತ್ತಿವೆ ಎಂದೂ ಪಕ್ಷಾತೀತ ರಾಜಕೀಯ ಬೆಳೆಯುತ್ತಿದೆ ಎಂದೂ ಕೆಲವು ಹಿತಾಸಕ್ತಿಗಳು ಪ್ರಚಾರಮಾಡುತ್ತಿವೆ" ಎಂದು ತಿಳಿಸಿದ ಕಾಂ. ಇ.ಎಂ ಎಸ್.ರು, "ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ ನೇತೃತ್ವದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳು ಆರಂಭದಲ್ಲಿ ಪಕ್ಷಾತೀತವಾಗೇ ನಡೆದಿದ್ದವು" ಎನ್ನುತ್ತಾ, "ಬೆಳೆದುಬರುತ್ತಿರುವ ಜನಸಾಮಾನ್ಯರ ಹೋರಾಟಗಳು ಆರಂಭದಲ್ಲಿ ಪಕ್ಷಾತೀತವಾಗೇ ಇದ್ದು ಕಾಲಾನುಕ್ರಮದಲ್ಲಿ ಸಕ್ರಿಯ ರಾಜಕೀಯ ಪಕ್ಷಗಳ ನೇತೃತ್ವದಿಂದ ಇನ್ನೂ ಮೇಲ್ಮಟ್ಟಕ್ಕೆ ಒಯ್ಯಲು ಸಾಧ್ಯತೆಯಿದೆ ಎಂಬುದನ್ನು ಮಹಾರಾಷ್ಟ್ರದ ರೈತಚಳುವಳಿ ತೋರಿಸಿಕೊಟ್ಟಿದೆ" ಎಂದರು.

ಕೇರಳ, ಬಂಗಾಳಗಳ ರಾಜ್ಯಸರಕಾರಗಳ ಬಗ್ಗೆ ಪ್ರಸ್ತಾಪಿಸುತ್ತಾ "ಸಂಯುಕ್ತ ರಂಗದ ಘಟಕ ಪಕ್ಷಗಳಲ್ಲಿ ಕೆಲವು ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ, ರೈತರ ಸಮಸ್ಯೆಗಳ ಬಗ್ಗೆ, ಕಾರ್ಮಿಕರ ಸಮಸ್ಯೆ ಬಗ್ಗೆ, ಜನತೆಯ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ ಬಗ್ಗೆ ರಂಗದ ಎಲ್ಲ ಪಕ್ಷಗಳೂ ಒಮ್ಮತ ಅಭಿಪ್ರಾಯ ಹೊಂದಿವೆ" ಎಂದರು.

"ಹಿಂದಿನ ಅನುಭವಗಳಿಂದ ನಾವು ಪಾಠಕಲಿತಿದ್ದೇವೆ." "ಇಂದಿರಾ ಮತ್ತೆ ಅಧಿಕಾರಕ್ಕೆ ಬಂದಿರುವಾಗ ಸರ್ವಾಧಿಕಾರವನ್ನು ವಿರೋಧಿಸುವ ಎಲ್ಲ ರಾಜಕೀಯ ಪಕ್ಷಗಳನ್ನು ಒಂದೇ ವೇದಿಕೆಯ ಮೇಲೆ ಅಣಿನೆರೆಯಿಸುವ ಅವಶ್ಯಕತೆ ಬಹಳವಾಗಿದೆ. ಜನಸಾಮಾನ್ಯರ ಸಂಕಷ್ಟಗಳ ಪರಿಹಾರಕ್ಕಾಗಿ ಸಾಮೂಹಿಕ ಹೋರಾಟಗಳನ್ನು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ನೇತೃತ್ವದಲ್ಲಿ ಸಂಘಟಿಸಬೇಕಾಗಿದೆ" ಎಂದರು.

(ಕಡೇ ಪುಟ ನೋಡಿ)

ಭೂಮಾಲೀಕರ ಅಟ್ಟಹಾಸ



ರೈತರಿಲ್ಲದ ಸಮಯದಲ್ಲಿ ಬಂದೂಕು, ಕೊಡಲಿ, ದೊಣ್ಣೆ ಮುಂತಾದ ಮಾರಕಾಸ್ತ್ರಗಳಿಂದ ಸಜ್ಜಿತ ಗೂಂಡಾ ಪಡೆಗಳು ಬಂದ್ರೆಒಡ್ಡುವಿನಲ್ಲಿ ಬಡ ಕೃಷಿಕೂಲಿಕಾರರ ಗುಡಿಸಲುಗಳಿಗೆ ಬೆಂಕಿ ಇಟ್ಟು ಇದ್ದ ಅಲ್ಪ ಸ್ವಲ್ಪ ವಸ್ತುಗಳನ್ನು ದೋಚಿಕೊಂಡು ಹೋದ ಅಮಾನುಷ ಘಟನೆ ನಡೆದಿದೆ.

ಹಿನ್ನೆಲೆ

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಕೋಡಿಹಳ್ಳಿ ಸಮೀಪದ ಬಂದ್ರೆಒಡ್ಡುವಿನಲ್ಲಿ ಸುಮಾರು 15ಲಕ್ಷ ರೂಗಳ ನೀರಾವರಿ ಯೋಜನೆಯೊಂದು ಆರಂಭವಾಗಲಿದೆ. ಈ ಪ್ರದೇಶದಲ್ಲಿ ಸರ್ಕಾರದ ಮತ್ತು ಅರಣ್ಯ ಇಲಾಖೆಯ ಸುಮಾರು 1200 ಎಕರೆ ಜಮೀನು ಬಂಜರು ಬಿದ್ದಿತ್ತು. ಇದರ ಪಕ್ಕದಲ್ಲೆ ಬಂದ್ರೆ ಒಡ್ಡು ಅರಣ್ಯವಿದೆ. ಸ್ವಾತಂತ್ರ್ಯ ಬರುವುದಕ್ಕೆ ಮೊದಲೂ ಸ್ವಾತಂತ್ರ್ಯ ಬಂದ ನಂತರವೂ ಅರಣ್ಯ ಇಲಾಖೆಯವರು ಈ ಬಂಜರು ಜಮೀನಿನಲ್ಲಿ ಅರಣ್ಯ ಬೆಳೆಸುವ ಗೋಜಿಗೆ ಹೋಗಿಲ್ಲ.

ಈ ಅರಣ್ಯದ ಸುತ್ತಮುತ್ತ ತಿಮ್ಮನಪಲ್ಲಿ, ಬೈಪಲ್ಲಿ, ಸೊನ್ನಿಪಲ್ಲಿ, ಕೋಡಿಹಳ್ಳಿ, ವೆರಂಪಲ್ಲಿ, ರೆಡ್ಡಿವಾರು ಪಲ್ಲಿ, ಗೌನಪಲ್ಲಿ, ಅಪಗಾನಪಲ್ಲಿ, ಸೋಲೇಪಲ್ಲಿ ಮತ್ತು ನಕ್ಕಲಗಡ್ಡ ಎಂಬ ಹಳ್ಳಿಗಳಿವೆ. ಈ ಹಳ್ಳಿಗಳ ಕೆಲವು ಜಮೀನ್ದಾರರು ಸುಮಾರು 150-200 ಎಕರೆ ಜಮೀನನ್ನು ಸ್ವಾಧೀನಪಡಿಸಿ (ಅಕ್ರಮವಾಗಿ) ಕೊಂಡು ಉಳುಮೆಮಾಡುತ್ತಿದ್ದಾರೆ. ಈ ಜಮೀನು ಈಗಲೂ ಈ ಮಹಾನುಭಾವರ ಕಟ್ಟೆಯಲ್ಲೇ ಇದೆ. ಈ ಮೇಲ್ಕಂಡ ಹಳ್ಳಿಗಳ ಕೆಲವು ಕೃಷಿಕೂಲಿಕಾರರು ಈ ಬಂಜರು ಜಮೀನನ್ನು ಉತ್ತು ಬಿತ್ತನೆಮಾಡಲು ಯೋಚಿಸಿ ತಾಲ್ಲೂಕು ಶಾಸಕರಾಗಿದ್ದ ರಮೇಶಕುಮಾರರನ್ನು ಕಂಡಿದ್ದರು. "ನೀವು ಹೋಗಿ ಕಟ್ಟುಪಡೆದು ಉಳಿಮೆಮಾಡಿ" ಎಂದು ಶಾಸಕನ ಉಪದೇಶ. ಉಳಿಮೆಮಾಡಲು ಯತ್ನಿಸಿದರೆ ಅರಣ್ಯ ಇಲಾಖೆಯವರು, ಜಮೀನ್ದಾರರು ಮತ್ತು ಪೋಲೀಸಿನವರೂ ಸೇರಿ ಜಾಗ ಖಾಲಿ ಮಾಡಿಸಿದ್ದಾಯಿತು. ಮತ್ತೆ ರಮೇಶಕುಮಾರರ ಬಳಿ ಹೋದರೆ "ನನ್ನಿಂದೇನೂ ಆಗುವುದಿಲ್ಲ" ಎಂಬ ಹಾರಿಕೆಯ ಉತ್ತರ ಬಂದಿತು. ಈ ಮಧ್ಯೆ ಯಾವನೋ ಪುಢಾರಿ ಜಮೀನು ಪಟ್ಟಾ ಕೊಡಿಸುವೆನೆಂದು ಹೇಳಿ ತಲಾ 200 ರೂ. ಸಂಗ್ರಹಿಸಿದ್ದನು. ಅಮಾಯಕ ಈ ಜನರು ಕಾಂಗ್ರೆ ಧುರೀಣನನ್ನು ಸಂಪರ್ಕಿಸಿದರು. "ಇಂದಿರಾಗಾಂಧಿ ಫೋಟೋ ತಗಲಿಹಾಕಿ ಉಳಿಮೆ ಮಾಡಿ" ಎಂದು ಸಲಹೆ.

ನಂತರ ಸ್ಥಳೀಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತ ಕಾಂ. ಮುನೀಶ್ವರಾಚಾರಿಯವರನ್ನು ಕೂಡಿಕೊಂಡು ಪಕ್ಷದ ಯುವನಾಯಕ ಕಾಂ. ಶ್ರೀರಾಂರೆಡ್ಡಿಯವರನ್ನು ಕಂಡರು. ಸಮಸ್ಯೆಗಳನ್ನು ಕೇಳಿಸಿಕೊಂಡ ರೆಡ್ಡಿಯವರು, ಸುತ್ತಮುತ್ತಲಿನ ಹಳ್ಳಿಗಳ ಎಲ್ಲ ಕೃಷಿಕೂಲಿಕಾರರನ್ನು ಸೇರಿಸಿ ಸಾಮೂಹಿಕ ಹೋರಾಟ ಮಾಡಿದರೆ ಮಾತ್ರ ಸಮಸ್ಯೆ ಬಗೆಹರಿಯಲು ಸಾಧ್ಯ ಎಂದು ತಿಳಿಸಿದರು. ಸುಮಾರು ದಿನಗಳ ಸತತ ಪ್ರಯತ್ನದಿಂದ 60-70 ಜನರನ್ನು ಮೇಳವಿಸುವುದು ಸಾಧ್ಯವಾಯಿತು. ಈ ಜನರ ಬೆಂಬಲದಿಂದ ರೈತಸಂಘವನ್ನು ಪ್ರಾರಂಭಿಸಿ ಒಂದು ಸಮಿತಿ ರಚಿಸಲಾಯಿತು. ಈ ಸಮಿತಿಗೆ ಕಾಂ ಮುನೀಶ್ವರಾಚಾರಿ ಕಾರ್ಯದರ್ಶಿಯಾಗಿ ಚುನಾಯಿತರಾದರು. ನಂತರ ಶೀಘ್ರ ಕಾರ್ಯಾಚರಣೆ ಶುರುವಾಯಿತು. ಮೊದಲ ಹೆಜ್ಜೆಯಾಗಿ ಈ ಪ್ರದೇಶದಲ್ಲೆ ಬಹಿರಂಗ ಸಭೆ ಏರ್ಪಡಿಸಿ, ಸುತ್ತಮುತ್ತಲ ಹಳ್ಳಿಗಳ ರೈತ ಬಾಂಧವರ ಬೆಂಬಲ ಪಡೆಯಲು ಯತ್ನ ಆರಂಭವಾಯಿತು. ತಾಲ್ಲೂಕಿನ ಸುಮಾರು ಹಳ್ಳಿಗಳಲ್ಲಿ ಈ ಸಮಸ್ಯೆಯ ಬಗ್ಗೆ ಬಹಿರಂಗ ಸಭೆಗಳನ್ನು ಏರ್ಪಡಿಸಿದರು. ನಂತರ ಸುಮಾರು 200-250 ಜನ ಹರಿಜನ ಕೃಷಿಕೂಲಿಕಾರರು ಕಾಂ. ಮುನೀಶ್ವರಾಚಾರಿ ನೇತೃತ್ವದಲ್ಲಿ ಮೆರವಣಿಗೆಯಲ್ಲಿ ಹೋಗಿ ತಹಸೀಲ್ದಾರರಿಗೆ ದರಖಾಸ್ತು ಬಗ್ಗೆ ಅರ್ಜಿಹಾಕಿದರು. ಕಲ್ಲುಬಂಡೆಗಳ ನಡುವೆ, ವಾಹನ ಸಂಚಾರ ಅಸಾಧ್ಯವಾದ, ನೀರು-ನೆರಳಿಲ್ಲದ ಗೊಂಡಾರಣ್ಯದಲ್ಲಿ ತುಂಡುಭೂಮಿ ಪಡೆಯಬೇಕೆಂಬ ಆಸೆಹೊತ್ತ ಜನರು ತಲೆಮೇಲೊಂದು ಸೂರನ್ನು ನಿರ್ಮಿಸಿಕೊಂಡರು. ನೆಲ ಹಸನುಮಾಡಿ ಉಳಿಮೆ ಮಾಡಲು ಆರಂಭಿಸಿದರು.

ತಮ್ಮಲ್ಲಿ ಜೀತಮಾಡಿಕೊಂಡಿದ್ದ ಹರಿಜನರು ಜಮೀನಿಗೆ ಒಡೆಯರಾಗುವುದು ಸುತ್ತಮುತ್ತಲ ಜಮೀನ್ದಾರರಿಗೆ ಕಸಿವಿಸಿ ಉಂಟುಮಾಡಿತು. ಜೀತದವರೇ ಜಮೀನಿಗೆ ಒಡೆಯರಾದರೆ ತಮ್ಮ ಜಮೀನಿನ ಕೆಲಸಮಾಡುವವರಾರು? ಈರ್ಷೆ ಶುರುವಾಯಿತು. ಗೊಂಡಾರಣ್ಯದಲ್ಲಿ ಭಗೀರಥ ಪ್ರಯತ್ನದಿಂದ ಉಳಿಮೆಗೆ ಯತ್ನಿಸುತ್ತಿದ್ದ ಅಮಾಯಕರಿಗೆ ಅನೇಕ ವಿಧದಲ್ಲಿ ಹಿಂಸೆ ಪ್ರಾರಂಭವಾಯಿತು. ಈ ವರ್ಷವಂತೂ ಕೋಲಾರ ಜಿಲ್ಲೆ ಮಳೆಯಿಲ್ಲದೇ ಬೆಂಗಾಡಾಗಿದೆ ಕೂಲಿಯಿಲ್ಲದೇ ಬಡಜನರು ಬದುಕುವುದೇ ಕಷ್ಟವಾಗಿದೆ. ಬಂದ್ರೆಒಡ್ಡುವಿನ ಹರಿಜನ ಕೃಷಿಕೂಲಿಕಾರರು ಜೀವನೋಪಾಯಕ್ಕೆ ಪಕ್ಕದಲ್ಲೇ ಹರಿಯುತ್ತಿದ್ದ ನದಿಯ ಹರವಿನಲ್ಲಿ ಸ್ವಲ್ಪ ಹುರುಳಿ ಬಿತ್ತಿಕೊಂಡರು. ಮಗುವನ್ನು ಜೋಪಾನಮಾಡುವಂತೆ ಜೋಪಾನ ಮಾಡಿದರು. ಒಂದು ರಾತ್ರಿ ಜಮೀನ್ದಾರ ರಾಕ್ಷಸರು ಧಾಳಿಮಾಡಿ ಬೆಳೆದಿದ್ದ ಹುರುಳಿಯನ್ನು ಸಮೂಲ ನಾಶಮಾಡಿದರು. "ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ"ವೆಂಬಂತೆ ಅನೇಕ ದಿನಗಳ ಶ್ರಮದಿಂದ ಬೆಳೆದಿದ್ದ ಹುರುಳಿಬೆಳೆ ಕೇವಲ ನಿಮಿಷಗಳಲ್ಲಿ ನಾಶವಾಯಿತು.

ರಾಜ್ಯದ ರಾಜ್ಯಪಾಲ ಶ್ರೀ ಗೋವಿಂದನಾರಾಯಣರಿಂದ ಕೋಲಾರಜಿಲ್ಲೆಯ ಪ್ರವಾಸ ನಡೆದಿತ್ತು. ಶ್ರೀನಿವಾಸಪುರಕ್ಕೂ ಬಂದಾಗ ಕಾಂ. ಶ್ರೀರಾಂರೆಡ್ಡಿ ನೇತೃತ್ವದಲ್ಲಿ ಭೂರಹಿತ ಜನರು ಗವರ್ನರಿಗೆ ಮನವಿಕೊಡಲು ತೆರಳಿದರು. ಆದರೆ ದೊರೆ ಕಾರು ಬಿಟ್ಟು ಇಳಿಯಲೇ ಇಲ್ಲ ನಾಲ್ಕು ಸಾಂತ್ವನದ ಮಾತು ಆಡಲಿಲ್ಲ. ಬಡತನದ ಬೇಗೆಯಿಂದ ಕಂಗಾಲಾಗಿದ್ದ ಜನ ದೊರೆಯನ್ನೇ ಘೇರಾವೋ ಮಾಡಲು ಪ್ರಯತ್ನಿಸಿದಾಗ ಮಾತ್ರ ರಾಜ್ಯಪಾಲರು ಕೆಳಗಿಳಿದು ಬಂದು ಮನವಿಸ್ವೀಕರಿಸಿದರು. ಇದರ ಪರಿಣಾಮವಾಗಿಯೋ ಏನೋ ತಾಲ್ಲೂಕು ತಹಸೀಲ್ದಾರರು ಒಂದು ವಾರದ ನಂತರ ಈ ಅರಣ್ಯಕ್ಕೆ ಬಂದು ಸ್ಥಳ ವೀಕ್ಷಿಸಿದರು. ಭೂಮಿ ಕೃಷಿಯೋಗ್ಯವಾಗಿರುವುದಾಗಿಯೂ, ಭೂರಹಿತ ಜನರಿಗೆ ವಿತರಣೆ ಮಾಡಬಹುದೆಂದು ಅಭಿಪ್ರಾಯ ಪಟ್ಟರೆಂದು ತಿಳಿದು ಬಂದಿತು. ಅರಣ್ಯ ಇಲಾಖೆಯವರು ತಮ್ಮ ಜಮೀನನ್ನು ಬಿಡಲು ಒಪ್ಪಿದರೆ ಸರಕಾರ ಈ ಬಗ್ಗೆ ತಿಳಿಸಿ ಜಮೀನು ವಿತರಣೆ ಯತ್ನಿಸುವೆನೆಂದು ಭರವಸೆಯನ್ನು ಕೊಟ್ಟರು.

ಡಿಸೆಂಬರ್ 12 ಬೆಂಗಳೂರಿನಲ್ಲಿ ರೈತ ಕಾರ್ಮಿಕರ ಬೃಹತ್ ರ‍್ಯಾಲಿ ಏರ್ಪಾಡಾಗಿತ್ತು. ಈ ರ‍್ಯಾಲಿಯಲ್ಲಿ ಭಾಗವಹಿಸಲು 3-4 ದಿನ ಉಪವಾಸವಿದ್ದು ಹಣ ಸೇರಿಸಿ ಬೆಂಗಳೂರಿಗೆ ಬಂದಿದ್ದರು. ಗುಡಿಸಲುಗಳಿದ್ದ ಸ್ಥಳದಲ್ಲಿ ಕೇವಲ 3-4 ಜನ ವೃದ್ಧರು, ಕೆಲವೇ ಬಾಲಕರಿದ್ದರು. ಇದೇ ಸುಸಮಯವೆಂದು ಭಾವಿಸಿ ಹೊಂಚು ಹಾಕಿ ಕುಳಿತಿದ್ದ ಜಮೀನ್ದಾರರ ಗೂಂಡಾಪಡೆ ನುಗ್ಗಿ ವೃದ್ಧರನ್ನು ಕೈ ಹಿಡಿದು ಹೊರಗೆಳೆದರು. ತಟ್ಟೆ, ಮಡಿಕೆ-ಕುಡಿಕೆಗಳನ್ನು ಚೂರುಚೂರುಮಾಡಿದರು. ತಿಮ್ಮಕ್ಕನೆಂಬ 80 ವರ್ಷದ ಮುದುಕಿಯನ್ನು ತಿಮ್ಮನಪಲ್ಲಿಯ ಧೀರ ಬೈಯಾರೆಡ್ಡಿ ಒದ್ದು, ಹೊಡೆದು ಬಡಿದುಹಾಕಿದನು. ಅಡ್ಡ ಬಂದವರಿಗೆ ಏಟುಕೊಟ್ಟರು. ಅಂತಸ್ತುಗಳ ಮಹಡಿಗಳಿಗೆ, ಹವಾ ನಿಯಂತ್ರಿತ ಕೋಣೆಗಳಿಗೆ ಸವಾಲಾಗಿ ನಿಂತಿದ್ದ ಗುಡಿಸಲುಗಳಿಗೆ ಬೆಂಕಿ ಇಟ್ಟರು. ಮಾರಣ ಹೋಮ ಮಾಡಿದರು. ಉರಿಯುತ್ತಿದ್ದ ಬೆಂಕಿಯನ್ನು ನೋಡಿ ತಾವು ಬಂದದ್ದು ಸಾರ್ಥಕವಾಯಿತು ಎಂದು ಬೀಗಿಕೊಂಡು ಮರಳಿದರು.

ಮರುದಿನ 13ರಂದು ರ‍್ಯಾಲಿಗೆ ತೆರಳಿದ್ದವರು ವಾಪಸು ಬಂದಾಗ ಕಂಡದ್ದು ಸುಟ್ಟು ಕರಕಾಗಿ ಕೇವಲ ಅವಶೇಷ ಮಾತ್ರ ಉಳಿದಿದ್ದ ಸ್ಥಳ, ಸುತ್ತಲೂ ಸ್ಮಶಾನಮೌನ.

ಘಟನೆಗೆ ಕಾರಣ

ಕೃಷಿಕೂಲಿಗಾರರು ಸಧ್ಯ ಕಟ್ಟೆ ಮಾಡಿಕೊಂಡಿರುವ ಭೂಮಿ ಮುಂದೆ ನೀರಾವರಿಯಿಂದಾಗಿ ಫಲವತ್ತಾಗಲಿದೆ. ಈ ಜಮೀನಿಗಿಂತಲೂ ಮುಂದೆ ಇರುವ ಬಲಾಢ್ಯ ಕೃಷಿಕರ ಜಮೀನಿಗೆ ನೀರು ಸರಬರಾಜಾಗುತ್ತಲಿದೆ. ಕೆಲವರಂತೂ ಬಂಜರು ಜಮೀನನ್ನೇ ಅಕ್ರಮಸಾಗುವಳಿ ಮಾಡುತ್ತಿದ್ದಾರೆ. ಇದನ್ನು ಕೇಳುವವರು ಯಾರೂ ಇಲ್ಲ. ಭೂರಹಿತ ಕೂಲಿಗಾರರು ನೀರನ್ನು ಬಳಸಿಕೊಂಡರೆ ತಮ್ಮ ಜಮೀನಿನಲ್ಲಿ ತೊಂದರೆಯಾಗುವುದೋ ಎಂಬ ಭೀತಿ ಇವರಿಗೆ. ನೀರಾವರಿ ಸೌಲಭ್ಯ ಪಡೆದು ತಮ್ಮ ಜೀತದಾಳುಗಳು ತಮಗಿಂತ ಮೇಲೇರಿದರೇ? ಎಂಬುದೇ ಈ ದ್ವೇಷಕ್ಕೆ ಕಾರಣ.

ನಂತರ ಪೋಲೀಸರಿಗೆ ದೂರನ್ನು ಸಲ್ಲಿಸಲಾಯಿತು. ಕೊನೆಗೆ ಕಾಂ. ಲಕ್ಷ್ಮಣರೆಡ್ಡಿ ಪತ್ರಕರ್ತರನ್ನು ಕರೆದುಕೊಂಡು ಸ್ಥಳಕ್ಕೆ ದಾವಿಸಿದರು. ದಾಳಿಗೀಡಾದ ಜನರ ಕಷ್ಟಕೋಟಲೆಗಳನ್ನು ವಿವರಿಸಿದರು. ಅಂದು (ಡಿ. 16) ಪೋಲೀಸರು ಬಂದರು. ಸುದ್ದಿ ತಿಳಿದು ಕಾಂ. ಶ್ರೀರಾಮರೆಡ್ಡಿ, ಅಶ್ವತ್ಥರೆಡ್ಡಿ, ವೆಂಕಟಗಿರಿಯಪ್ಪ, ನಾರಾಯಣಸ್ವಾಮಿ, ವೆಂಕಟ್ರಾಮಯ್ಯ, ಮತ್ತು ಕಾಂ. ಮುನೀಶ್ವರಾಚಾರಿ ಮೊದಲಾದ ಧುರೀಣರು ಸ್ಥಳಕ್ಕೆ ಧಾವಿಸಿ ನೊಂದ ಜನರಿಗೆ ಸಾಂತ್ವನ ಪಡಿಸಿದರು. ನಂತರ ಇವರೆಲ್ಲ ಜಿಲ್ಲೆಯ ಡಿ.ಸಿ., ಎಸ್.ಪಿ. ಮತ್ತು ಅರಣ್ಯ ಇಲಾಖೆಯ ಮುಖ್ಯಸ್ಥರನ್ನು ಕಾಣಲು ಕೋಲಾರಕ್ಕೆ ತೆರಳಿದರು. ಜಿಲ್ಲಾಧಿಕಾರಿಯು ಮಹಾರಾಣಿಯ ಸ್ವಾಗತಕ್ಕೆ ಕೆ.ಜಿ.ಎಫ್.ಗೆ ಹೋಗಿದ್ದರಿಂದ ಲಭ್ಯವಿರಲಿಲ್ಲ. ಲಭ್ಯವಿದ್ದ ಅಧಿಕಾರಿಗಳಿಗೆ, ಪೋಲೀಸ ಅಧಿಕಾರಿಗೆ ದೂರುಸಲ್ಲಿಸಿ ತುರ್ತು ಕ್ರಮಕ್ಕೆ ಆಗ್ರಹಪಡಿಸಿದರು.

ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾದ ನಂತರ ರಾಜ್ಯದ ಮೂವರು ಸಚಿವರುಗಳು ಶ್ರೀ ಕಾಗೋಡು ತಿಮ್ಮಪ್ಪ, ರೇಣುಕಾರಾಜೇಂದ್ರನ್, ಮಲ್ಲಿಕಾರ್ಜುನ ಖರ್ಗೆ, ತಾಲ್ಲೂಕು ಶಾಸಕರೂ, ಉಳಿದ ಪರಿವಾರ ಸ್ಥಳ ವೀಕ್ಷಣೆಗೆ ಆಗಮಿಸಿದರು. ಬಡಜನತೆಯ ಓಟುಗಳಿಂದ ಆರಿಸಿ ಬಂದಿರುವ ಶಾಸಕನಿಗೆ 6 ತಿಂಗಳಿಂದಲೂ ಅಸ್ತಿತ್ವಕ್ಕಾಗಿ ಹೋರಾಟ ಮಾಡುತ್ತಿರುವ ಸ್ಥಳ ಎಲ್ಲಿದೆ? ಅಲ್ಲಿಗೆ ಹೇಗೆ ಹೋಗಬೇಕು? ಗೊತ್ತಿರಲಿಲ್ಲ. ಈ ಸಮಯದಲ್ಲೇ ಕಾಂ. ಅಶ್ವತ್ಥರೆಡ್ಡಿ, ವೆಂಕಟ್ರಾಮಯ್ಯ ಮೊದಲಾದವರೂ ಬಂದರು. ಸಚಿವತ್ರಯರಿಗೆ ಕಾಂ. ಅಶ್ವತ್ಥರೆಡ್ಡಿ ಈ ಘಟನೆಯ ಹಿನ್ನೆಲೆ, ತುಂಡು ಭೂಮಿಗಾಗಿ ಪರದಾಡುತ್ತಿರುವವರ ಗೋಳನ್ನು ವಿವರಿಸಿದರು. ಕೇಳಿಸಿಕೊಂಡ ಸಚಿವರು ತುರ್ತುಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಸಮಯದಲ್ಲಿ ಒಂದು ಸ್ವಾರಸ್ಯಕರ ಘಟನೆ ನಡೆಯಿತು. ಶ್ರೀಮತಿ ರೇಣುಕಾರಾಜೇಂದ್ರನ್ ಅವರು ತಮ್ಮ ಸಮೀಪದಲ್ಲಿ ತುಂಡು ಚಡ್ಡಿ ಹಾಕಿಕೊಂಡಿದ್ದನೊಬ್ಬನನ್ನು "ನೀನು ಯಾವ ಪಕ್ಷ"? ಎಂದು ಕೇಳಿದರು. "ನಾನು ಕಮ್ಯುನಿಸ್ಟ್ ಪಕ್ಷ" ಎಂದು ಆ ಬಾಂಧವ ಉತ್ತರ ನೀಡಿದ. ತಮ್ಮ ಕಷ್ಟನಷ್ಟಗಳಲ್ಲಿ ಆಸರೆಯಾಗಿ ನಿಂತಿದ್ದ ಕೆಂಬಾವುಟವನ್ನು ಹೆಮ್ಮೆಯಿಂದ, ಗೌರವದಿಂದ ವೀಕ್ಷಿಸುತ್ತ ಆ ಮಾತುಗಳನ್ನಾಡಿದ್ದ.

ಇದುವರೆಗೂ ಯಾರನ್ನೂ ಬಂಧಿಸಿಲ್ಲ. ಹರಿಜನ ಕೃಷಿಕೂಲಿಕಾರರ ಮೇಲಾದ ದಾಳಿಯನ್ನು ಪ್ರತಿಭಟಿಸಿ ರೈತಸಂಘ ಡಿಸೆಂಬರ್ 30ರಂದು ಪ್ರತಿಭಟನಾ ಸಭೆಯನ್ನು ಏರ್ಪಡಿಸಿದೆ.

ತಮ್ಮ ಸರ್ವಸ್ವವನ್ನೂ ಕಳೆದುಕೊಂಡಿದ್ದರೂ, ಗುಡಿಸಲುಗಳನ್ನು ಪುನರ್ನಿರ್ಮಿಸಿ ದೃಢಸಂಕಲ್ಪದಿಂದ ತಲೆಯೆತ್ತಿ ನಿಂತಿರುವ ಜನರನ್ನು ಕಂಡಾಗ ಶ್ರೀ ನಿರಂಜನರ "ಮೃತ್ಯುಂಜಯ" ಕಾದಂಬರಿಯ ಕೊನೆಯಲ್ಲಿ "ಮೆನ" ಹೇಳುವ ಮಾತು (ರಾತ್ರಿ ಕಳೆದ ಹಗಲು ಬಂದೇ ಬರುತ್ತೆ) ಜ್ಞಾಪಕಕ್ಕೆ ಬಂದಿತು.

—ಕುಲ್ಕರ್ಣಿ

ಎ. ಐ. ಸಿ. ಸಿ. ಅಧಿವೇಶನ

ಡಿಸೆಂಬರ್ 7, 8ರಂದು ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಇಂದಿರಾ ಕಾಂಗ್ರೆಸ್)ಯ ಸಮಾವೇಶ 1980ರ ಲೋಕಸಭಾ ಚುನಾವಣೆಗಳ ನಂತರ ಮೊದಲನೆಯದು, ಲೋಕಸಭಾ ಚುನಾವಣೆಗಳ ನಂತರ 9 ರಾಜ್ಯಗಳಲ್ಲಿ ವಿಧಾನಸಭೆಗಳ ವಿಸರ್ಜನೆ ಆಯಿತು ಮತ್ತು ಇವುಗಳಲ್ಲಿ 8 ರಾಜ್ಯಗಳಲ್ಲಿ ಕಾಂಗ್ರೆಸ್(ಐ) ಅಧಿಕಾರ ವಹಿಸಿಕೊಂಡವು. ಈ ಎರಡು ಚುನಾವಣೆಗಳಲ್ಲಿ ಯುವ ಕಾಂಗ್ರೆಸ್ (ಐ)ನ ಪ್ರಮುಖ ವಕ್ತಾರೆಯಾಗಿ ಶ್ರೀಮತಿ ಗಾಂಧಿ ದಕ್ಷ ಸರಕಾರ ರಚಿಸುವುದಾಗಿ ಭರವಸೆ ನೀಡಿದ್ದರು. ಇದಲ್ಲದೆ ನಿರುದ್ಯೋಗ ಸಮಸ್ಯೆಗೆ ಪರಿಹಾರ; ಬಡತನದ ನಿವಾರಣೆ; ಮಹಿಳೆಯರಿಗೆ, ಅಲ್ಪಸಂಖ್ಯಾತರಿಗೆ, ಹರಿಜನರಿಗೆ ರಕ್ಷಣೆ ಮತ್ತು ಜೀವನಾವಶ್ಯಕ ವಸ್ತುಗಳ ಬೆಲೆ ಇಳಿಸುವುದು ಇವೇ ಮುಂತಾದವನ್ನು ಸಹ ಮಾಡುವುದಾಗಿ ಭರವಸೆ ನೀಡಿದ್ದರು. ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡು ಸುಮಾರು ಒಂದು ವರ್ಷದಲ್ಲಿ ಪ್ರಥಮ ಬಾರಿಗೆ ಎ.ಐ.ಸಿ.ಸಿ. ಸೇರುತ್ತಿದೆ. ಆದ್ದರಿಂದ ಈ ಒಂದು ವರ್ಷದಲ್ಲಿ ಆಳುವ ಪಕ್ಷದ ಪ್ರತಿಜ್ಞೆಗಳಲ್ಲಿ ಎಷ್ಟನ್ನು ಜಾರಿಗೆ ತರಲಾಗಿದೆ (ಅಂತಹದೇನಾದರೂ ನಡೆದಿದ್ದರೆ) ಜನರ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗಿಲ್ಲದಿದ್ದರೆ, ಏಕೆ ಸಾಧ್ಯವಾಗಿಲ್ಲ ಅಥವಾ ಇದಕ್ಕೆ ಬಂದ ಎಡರು-ತೊಡರುಗಳೇನು ಎಂಬುದಕ್ಕೆ ವಿವರಣೆಯನ್ನು ಜನ ನಿರೀಕ್ಷಿಸಿದ್ದರು.

ಹೊಗಳು ಭಟ್ಟಂಗಿಗಳ ಅಧಿವೇಶನ

ಆದರೆ ಈ ಅಧಿವೇಶನದಲ್ಲಿ ನಡೆದದ್ದಾದರೂ ಏನು? ಜನರ ಜ್ವಲಂತ ಸಮಸ್ಯೆಗಳನ್ನು ಪೂರ್ತಿಯಾಗಿ ಕಡೆಗಣಿಸಿ, ಅಮುಖ್ಯ ವಿಷಯಗಳ ಬಗ್ಗೆ ಚರ್ಚೆ. ಎಲ್ಲಾ ಭಾಷಣಕಾರರು ಒಕ್ಕೊರಲಿನಿಂದ ಮಾಡಿದ್ದು; ವಿರೋಧ ಪಕ್ಷಗಳ ದೂಷಣೆ ಮತ್ತು ಶ್ರೀಮತಿ ಗಾಂಧಿಯನ್ನು ಹೊಗಳಿ ಅಟ್ಟಕ್ಕೇರಿಸಿದ್ದು. ಸ್ವಾಗತಸಮಿತಿ ಅಧ್ಯಕ್ಷ ಹೆಚ್. ಕೆ. ಎಲ್. ಭಗತ್ ತಮ್ಮ ಸ್ವಾಗತ ಭಾಷಣದಲ್ಲಿಯೇ ಇದಕ್ಕೆ ನಾಂದಿ ಹಾಡಿದರು. ಅವರು ಶ್ರೀಮತಿ ಗಾಂಧಿಯವರನ್ನು 'ನಮ್ಮ ಕಮಾಂಡರ್-ಇನ್-ಚೀಫ್ ರಾಷ್ಟ್ರಮಾ' ಎಂದು ಕರೆದು ತಮ್ಮ 'ಗೌರವಪೂರ್ಣ ಪ್ರಣಾಮ' ಸಲ್ಲಿಸಿದರು. ಆನಂತರ ಮಾತನಾಡಿದ ಎಲ್ಲರೂ ಶ್ರೀಮತಿ ಗಾಂಧಿಯವರನ್ನು 'ಏಕಮಾತ್ರ ರಕ್ಷಕಿ', 'ಸುಪ್ರೀಂ ಕಮಾಂಡರ್' 'ರಾಷ್ಟ್ರ ನೌಕೆಯನ್ನು ಸುಭದ್ರವಾಗಿ ಮುನ್ನಡೆಸಬಹುದಾದ ಏಕಮಾತ್ರ ಜನರಲ್' ಎಂಬಿತ್ಯಾದಿಯಾಗಿ ಕರೆದರು. ಅಲ್ಲದೆ ಶ್ರೀಮತಿ ಗಾಂಧಿಯವರಿದ್ದಾಗ ಮಾತ್ರ ಅಧಿವೇಶನದಲ್ಲಿ ಸದಸ್ಯರು ಹಾಜರಿರುತ್ತಿದ್ದರು. ಅವರ ಗೈರು ಹಾಜರಿಯಲ್ಲಿ ಅಧಿವೇಶನ ಹೆಚ್ಚು ಕಡಿಮೆ ಖಾಲಿ ಇರುತ್ತಿತ್ತು.

ಈ ಅಧಿವೇಶನ ಮೂರು ನಿರ್ಣಯಗಳನ್ನು ಅಂಗೀಕರಿಸಿತು-ಒಂದು ಅಂತರಾಷ್ಟ್ರೀಯ ಪರಿಸ್ಥಿತಿ ಬಗ್ಗೆ ಇನ್ನೊಂದು ದೇಶದ ರಾಜಕೀಯ ಸ್ಥಿತಿಯ ಬಗ್ಗೆ ಮತ್ತು ಮೂರನೇಯದು ಆರ್ಥಿಕ ಪರಿಸ್ಥಿತಿಯ ಬಗ್ಗೆ. ನಿರ್ಣಯಗಳಾಗಲಿ ಮತ್ತು ಅವುಗಳ ಮೇಲೆ ನಡೆದ ಚರ್ಚೆಗಳಾಗಲಿ ನೈಜಸ್ಥಿತಿಯನ್ನು ಬಿಂಬಿಸುತ್ತಿರಲಿಲ್ಲ. ಜಗತ್ತು ಮತ್ತು ನಮ್ಮ ದೇಶ, ನಮ್ಮ ಜನ ಎದುರಿಸುವ ಪ್ರಮುಖ ಸಮಸ್ಯೆಗಳಿಗೆ ಸಂಬಂಧಿಸಿದವೂ ಆಗಿರಲಿಲ್ಲ. ವಿರೋಧ ಪಕ್ಷಗಳ ಪಾತ್ರ, ಎಡಪಂಥೀಯ ಸರ್ಕಾರಗಳಿರುವ ರಾಜ್ಯಗಳಲ್ಲಿ 'ಕಾನೂನು ಮತ್ತು ವ್ಯವಸ್ಥೆ'ಯ ಪರಿಸ್ಥಿತಿ, ಅಧ್ಯಕ್ಷೀಯ ಮಾದರಿಯ ಸರ್ಕಾರ ಮುಂತಾದ ಚರ್ಚೆಗೇ ಅನರ್ಹವಾದ ವಿಷಯಗಳ ಬಗ್ಗೆ ಗಮನ ಕೇಂದ್ರೀಕೃತವಾಗಿತ್ತು. ಜನಸಾಮಾನ್ಯರ ತಲೆತಿನ್ನುತ್ತಿರುವ ಎಲ್ಲಾ ಸಮಸ್ಯೆಗಳಿಂದ ಗಮನ ಬೇರೆಡೆಗೆ ಹರಿಸುವ ಸರ್ವಪ್ರಯತ್ನಗಳನ್ನು ಅಧಿವೇಶನದಲ್ಲಿ ಮಾಡಲಾಯಿತು. ಈ ಅಸಂಬದ್ಧ ಚರ್ಚೆಯ ಉದ್ದೇಶ ಆಳುವ ಪಕ್ಷದೊಳಗಿನ ಒಳಜಗಳಗಳ ಮೇಲೆ ಗಮನ ಹರಿಯದಂತೆ ಮಾಡುವುದು ಸಹ.

ಅಮೆರಿಕಾದ ಕುಕೃತ್ಯಗಳ ಮೇಲೆ ಪರದೆ

ಅಮೆರಿಕನ್ ಸಾಮ್ರಾಜ್ಯಶಾಹಿಗಳು ವಿಶ್ವಶಾಂತಿಗೆ ದಿನೇದಿನೇ ಹೆಚ್ಚು ಬೆದರಿಕೆ ಹಾಕುತ್ತಿದ್ದಾರೆ. ಇದರ ಬಗ್ಗೆ ಎ.ಐ.ಸಿ.ಸಿ. ನಿರ್ಣಯ ಏನು ಹೇಳುತ್ತದೆ?

ಈ ನಿರ್ಣಯ ಸಹ, ಶ್ರೀಮತಿ ಗಾಂಧಿಯವರ ಹೊಗಳಿಕೆ ಮತ್ತು ಹಿಂದಿನ ಸರ್ಕಾರಗಳ ಮೇಲೆ ಆಪಾದನೆಗೆ ತನ್ನ ಕಾಣಿಕೆ ಸಲ್ಲಿಸುತ್ತದೆ. "ಕಾಂಗ್ರೆಸ್(ಐ) 1980 ಜನವರಿಯಲ್ಲಿ ಅಧಿಕಾರಕ್ಕೆ ಬಂದಾಗ ಅತಿ ಜಟಿಲ ಪರಿಸ್ಥಿತಿಯಲ್ಲಿ ಭಾರತವಿತ್ತು. ಹಿಂದಿನ ಎರಡು ಸರ್ಕಾರಗಳು ವಿದೇಶ ವ್ಯವಹಾರಗಳನ್ನು ಅಸಮರ್ಥವಾಗಿ ನಿರ್ವಹಿಸಿದ್ದರಿಂದ ಭಾರತದ ಅಂತರಾಷ್ಟ್ರೀಯ ನೀತಿ ಪರಿಣಾಮಕಾರಿಯಾಗಿರಲಿಲ್ಲ" ಆದರೆ "ಶ್ರೀಮತಿ ಗಾಂಧಿಯವರು ಅಧಿಕಾರ ವಹಿಸಿಕೊಂಡಕೂಡಲೇ ಅಂತರಾಷ್ಟ್ರೀಯ ಸಮುದಾಯ ಒಂದು ಹೊಸ ಪ್ರಕ್ರಿಯೆಯನ್ನು ಗ್ರಹಿಸಿದಂತಿದೆ."

ಈ ರೀತಿ ಬೆನ್ನು ತಟ್ಟಿಕೊಂಡ ನಂತರ ನಿರ್ಣಯ ಜಾಗತಿಕ ಪರಿಸ್ಥಿತಿಗೆ ಮಹಾಶಕ್ತಿಗಳೆರಡನ್ನೂ ಕಾರಣವೆಂದು ಹೇಳುತ್ತದೆ. "ಹದಗೆಡುತ್ತಿರುವ ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ಎ.ಐ.ಸಿ.ಸಿ. ಕಳವಳದಿಂದ ಗಮನಿಸುತ್ತಿದೆ, ಮಹಾಶಕ್ತಿ (Super Power)ಗಳ ನಡುವೆ ಶೀತ ಸಮರದಂತಹ ಸ್ಥಿತಿ ಮತ್ತು ತೀವ್ರ ಶಸ್ತ್ರಾಸ್ತ್ರ ಪೈಪೋಟಿ ಭಾರತದ ಸುತ್ತಮುತ್ತ ಪ್ರದೇಶಗಳಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಮತ್ತು ಅಭಿವೃದ್ಧ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವಣ ಬೆಳೆಯುತ್ತಿರುವ ಅಂತರ ಇವು ಕಳವಳಕಾರಿ ಸಂಗತಿಗಳು."

ಹದಗೆಡುತ್ತಿರುವ ಅಂತರಾಷ್ಟ್ರೀಯ ಪರಿಸ್ಥಿತಿಗೆ ಅಮೇರಿಕಾ ಮುಖ್ಯವಾಗಿ ಕಾರಣ ಎಂದು ಹೇಳಲು ನಿರ್ಣಯ ಹಿಂಜರಿಯುತ್ತದೆ. SALT-II ಒಪ್ಪಂದ ಮನ್ನಿಸಲು ಹಿಂಜರಿಯುತ್ತಿರುವುದು, ಶಸ್ತ್ರಾಸ್ತ್ರಗಳ ಅದರಲ್ಲೂ ಪರಮಾಣು ಶಸ್ತ್ರಾಸ್ತ್ರಗಳ ತೀವ್ರ ಪೈಪೋಟಿಯನ್ನು ಹೆಚ್ಚಿಸುತ್ತಿರುವುದು, ಯುರೋಪಿನಲ್ಲಿ ಅಣುಕ್ಷಿಪಣಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಿರುವುದು, ಪಶ್ಚಿಮ ಏಷ್ಯಾದಲ್ಲಿ ಇಸ್ರೇಲಿ-ಪರ ಪರಿಹಾರವನ್ನು ಅರಬ್ ದೇಶಗಳ ಮೇಲೆ ಹೊರಿಸಿ ಅವರ ಐಕ್ಯತೆಗೆ ಭಂಗ ತರಲು ಪ್ರಯತ್ನಿಸುತ್ತಿರುವುದು, ಇರಾನ್-ಇರಾಕ್ ಸಂಘರ್ಷದ ದುರ್ಲಾಭ ಪಡೆಯಲು ಪ್ರಯತ್ನಿಸುತ್ತಿರುವುದು. ದಕ್ಷಿಣ ಆಫ್ರಿಕಾ, ದಕ್ಷಿಣ ಅಮೇರಿಕಾವನ್ನು ಸೇರಿದಂತೆ ಒಂದು ಮಿಲಿಟರಿ ಒಪ್ಪಂದ ಮಾಡಲು ಪ್ರಯತ್ನಿಸುತ್ತಾ ನಾಟೋವನ್ನು ದಕ್ಷಿಣಕ್ಕೆ ವಿಸ್ತರಿಸಲು ಯತ್ನಿಸುತ್ತಿರುವುದು, ಎಲ್ಲಾ ಸಾಗರಗಳಲ್ಲಿಯೂ ಅದರಲ್ಲಿಯೂ ಹಿಂದೂ ಮಹಾಸಾಗರದಲ್ಲಿ ಪೋಲೀಸು ಕೆಲಸ ವಹಿಸಿಕೊಂಡಿರುವುದು, ತತ್‌ಕ್ಷಣ ಕಳಿಸಬಹುದಾದ ಸೈನ್ಯವನ್ನು ಆಯಕಟ್ಟಿನ ಜಾಗದಲ್ಲಿ ಇಟ್ಟಿರುವುದು, ಹಳೆ ಸೈನಿಕ ನೆಲೆಗಳನ್ನು ವಿಸ್ತರಿಸುತ್ತಾ ಹೊಸ ನೆಲೆಗಳನ್ನು ಸ್ಥಾಪಿಸುತ್ತಿರುವುದು; ಇವೇ ಮುಂತಾದ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಕಾರ್ಯಚರಣೆಗಳಿಂದಲೇ ವಿಶ್ವಶಾಂತಿಗೆ ಭಂಗ ಬಂದಿದೆ ಎಂದು ಈ ಸಂದರ್ಭದಲ್ಲಿ ನಿರ್ಣಯ ಮರೆಮಾಚುತ್ತದೆ.

ಜಗತ್ತನ್ನು ಅಣು ಸಮರದ ಅಂಚಿಗೆ ಒಯ್ಯುತ್ತಿರುವ ಅಮೇರಿಕನ್ ಸಾಮ್ರಾಜ್ಯಶಾಹಿ ಮಿಲಿಟರಿ ಕ್ರಮಗಳನ್ನು ಯಾವುದೇ ಅಲಿಪ್ತ ರಾಷ್ಟ್ರ ವಿರೋಧಿಸಿ ಖಂಡಿಸಬೇಕಾಗಿದೆ. ಶಸ್ತ್ರಾಸ್ತ್ರ ಕಡಿಮೆ ಮಾಡಲು ಮತ್ತು ನಿಶ್ಶಸ್ತ್ರೀಕರಣಕ್ಕೆ ಮಾತುಕತೆಗಳು ನಡೆಸುವ, ಮತ್ತು ಒಡಂಬಡಿಕೆ(detente) ಮತ್ತು ಶಾಂತಿಯ ನೀತಿಗೆ ಬದ್ಧವಾಗಿರುವ ಸೋವಿಯೆಟ್ ಯೂನಿಯನ್ ಮತ್ತು ಅಮೇರಿಕನ್ ಸಾಮ್ರಾಜ್ಯಶಾಹಿಗಳನ್ನು ಎ.ಐ.ಸಿ.ಸಿ.ಯ ನಿರ್ಣಯ ಒಂದೇ ಎನ್ನುವ ದೃಷ್ಟಿಯಿಂದ ನೋಡಿದೆ. ಹದಗೆಡುತ್ತಿರುವ ಪರಿಸ್ಥಿತಿಗೆ ಎರಡೂ ಮಹಾಶಕ್ತಿಗಳು(Super Powers) ಕಾರಣ ಎಂದಿದೆ.

ಯಾರು ಜವಾಬ್ದಾರರು?

ಭಾರತದ ಸುತ್ತಮುತ್ತ ದೇಶಗಳಲ್ಲಿ ಪ್ರಕ್ಷುಬ್ಧತೆ ಇದೆ ಎಂದು ನಿರ್ಣಯ ತಿಳಿಸುತ್ತದೆ. ಆದರೆ ಇದು ಹೆಚ್ಚಲು ಯಾರು ಕಾರಣ ಎನ್ನುವುದರ ಬಗ್ಗೆ ಮೌನ ತಾಳಿದೆ. 50ರ ದಶಕದಲ್ಲಿ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡುವ ಒಪ್ಪಂದದೊಂದಿಗೆ ಆರಂಭಿಸಿ, ಅಮೇರಿಕನ್ ಸಾಮ್ರಾಜ್ಯಶಾಹಿಗಳು ಈ ಉಪಖಂಡದ ದೇಶಗಳ ಸ್ವಾತಂತ್ರ್ಯ ಮತ್ತು ಭದ್ರತೆಗೆ ಭಂಗ ತರುವ ಕೆಲಸದಲ್ಲಿ ನಿರತರಾಗಿದ್ದಾರೆ, 1965 ಮತ್ತು 1971ರ ಎರಡೂ ಭಾರತ-ಪಾಕಿಸ್ತಾನ ಸಮರಗಳಲ್ಲಿ ಭಾರತವನ್ನು ಬಗ್ಗಿಸಲು ಪ್ರಯತ್ನಿಸಿದ್ದಾರೆ. ಇತ್ತೀಚೆಗೆ ಅಫಘಾನಿಸ್ತಾನದಲ್ಲಿ ಸ್ಥಾಪಿತವಾಗಿರುವ ಜನತಾ ಪ್ರಜಾಸತ್ತಾತ್ಮಕ ಸರಕಾರವನ್ನು ಉರುಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಪಾಕಿಸ್ತಾನದ ಉಪಯೋಗ ಪಡೆಯುತ್ತಿದ್ದಾರೆ. ಇದಲ್ಲದೆ ಪಶ್ಚಿಮ ಏಷ್ಯಾದಲ್ಲಿ ತಮ್ಮ 'ಪ್ರಮುಖ ಹಿತಾಸಕ್ತಿಗಳನ್ನು' ರಕ್ಷಿಸುವ ನೆಪದಲ್ಲಿ ಹಿಂದೂ ಮಹಾ ಸಾಗರದಲ್ಲಿ ದೊಡ್ಡ ಸೈನ್ಯವನ್ನು ಬಿಟ್ಟಿದ್ದಾರೆ. ಡಿಗೋ ಗಾರ್ಸಿಯ ನೆಲೆಯನ್ನು ವಿಸ್ತರಿಸುವುದಲ್ಲದೆ ಕೀನ್ಯಾ, ಸೋಮಾಲಿಯಾ, ಇಜಿಪ್ಟ್ ಮುಂತಾದ ಕಡೆ ಹೊಸ ನೆಲೆಗಳನ್ನು ಕಟ್ಟಲು ಸಜ್ಜಾಗಿದ್ದಾರೆ. ಹಿಂದೂಮಹಾಸಾಗರದಲ್ಲಿ ಪರಸ್ಪರ ಶಸ್ತ್ರಾಸ್ತ್ರ ಕಡಿತ ಮತ್ತು ಕ್ರಮೇಣ ಈ ಪ್ರದೇಶವನ್ನು ಶಾಂತಿ ವಲಯವನ್ನಾಗಿ ಮಾಡುವ ಬಗ್ಗೆ ಮಾತುಕತೆಗಳನ್ನು ಮೊದಲು ಏಕಪಕ್ಷೀಯವಾಗಿ ಮುರಿದಿರುವುದು ಅಮೇರಿಕವೇ. ಡಿಗೋ ಗಾರ್ಸಿಯ ದ್ವೀಪವನ್ನು ಮಾರಿಶಸ್ ಹಿಂದಿರುಗಿಸಬೇಕೆಂದು ಕೇಳುತ್ತಿದೆ. ಇದಕ್ಕೆ ಭಾರತ ತನ್ನ ಬೆಂಬಲವನ್ನು ಸಹ ಈಗಾಗಲೇ ವ್ಯಕ್ತಪಡಿಸಿದೆ ಆದರೆ ನಿರ್ಣಯ ಹಿಂದೂ ಮಹಾಸಾಗರ ಶಾಂತಿವಲಯ ಆಗಬೇಕೆಂದು ಪುನಃ ಕೇಳಿದ್ದರೂ, ಈ ಬಗ್ಗೆ ಮೌನವಾಗಿದೆ. ಇದು ಕಣ್ತಪ್ಪಿನಿಂದ ಉಳಿದ ದೋಷವಂತೂ ಇರಲಾರದು.

ವಿದೇಶ ಮಂತ್ರಿ ಪಿ.ವಿ. ನರಸಿಂಹರಾವ್ ಎ.ಐ.ಸಿ.ಸಿ.ಯಲ್ಲಿ ಮಾಡಿದ ಭಾಷಣದಲ್ಲಿ ಭಾರತ ಕೆಲವು ಬಾರಿ ಒಂದು ಬಣದೊಂದಿಗೆ ಓಟು ಮಾಡಿದರೆ, ಇನ್ನು ಕೆಲವು ಬಾರಿ ಇನ್ನೊಂದು ಬಣದೊಂದಿಗೆ ಓಟು ಮಾಡುತ್ತದೆ ಎಂದು ಹೇಳಿದರು. ಇದು ಕೂಡಾ ಹಾದಿತಪ್ಪಿದ ಹೇಳಿಕೆಯಾಗಿರಲಿಕ್ಕಿಲ್ಲ.

ಎರಡು ಜಾಗತಿಕ ಮಹಾ ಶಕ್ತಿಗಳಲ್ಲಿ ಒಂದು ಯುದ್ಧಕ್ಕಾಗಿ ಇನ್ನೊಂದು ಶಾಂತಿಗಾಗಿ ದುಡಿಯುತ್ತದೆ ಎಂಬುದನ್ನು ತಿಳಿಸದೆ ಅವೆರಡನ್ನೂ ಸಮಗೊಳಿಸುವುದು, ಅಲಿಪ್ತ ನೀತಿಯನ್ನು ಒಮ್ಮೆ ಒಂದು ಬಣಕ್ಕೆ ಇನ್ನೊಮ್ಮೆ ಇನ್ನೊಂದು ಬಣಕ್ಕೆ ಪರವಾಗಿ ಮಾತನಾಡುವುದರೊಂದಿಗೆ ಅಲಿಪ್ತ ನೀತಿಯನ್ನು ಕೇವಲ ನಿಷ್ಪಕ್ಷಪಾತದ ಪ್ರಶ್ನೆಯನ್ನಾಗಿ ಮಾಡಿರುವುದು ಇವೆಲ್ಲಾ ಅಲಿಪ್ತ ನೀತಿಯನ್ನು ಹಾಸ್ಯಾಸ್ಪದಗೊಳಿಸಿದೆ. ಅಲಿಪ್ತ ನೀತಿ ಸಾಮ್ರಾಜ್ಯಶಾಹಿಯ ವಿರೋಧದ ಮೇಲೆ ಆಧಾರಿತವಾಗಿದ್ದು, ಸುಸಂಬದ್ಧ ನಿಲುವುಗಳನ್ನು ತೆಗೆದುಕೊಳ್ಳಬೇಕು, ಸಾಮ್ರಾಜ್ಯಶಾಹಿ ಪ್ರಕ್ಷುಬ್ಧತೆ ಉಂಟುಮಾಡಿದಾಗ, ಪ್ರಗತಿಗಾಮಿ ಸರ್ಕಾರಗಳ ವಿರುದ್ಧ ಪಿತೂರಿ ನಡೆಸಿದಾಗ, ಅಭದ್ರತೆ ಮೂಡಿಸಲು ಯತ್ನಿಸಿದಾಗ, ಇದನ್ನು ಬಯಲು ಮಾಡಿ ಈ ಪ್ರಯತ್ನಗಳ ವಿರುದ್ಧ ಹೋರಾಡಬೇಕು. ಶಾಂತಿಗಾಗಿ ಅವಿರತವಾಗಿ ಶ್ರಮಿಸಬೇಕು, ಅಲಿಪ್ತ ದೇಶಗಳಲ್ಲಿ ಸಾಮ್ರಾಜ್ಯಶಾಹಿ ಪರ ಮತ್ತು ವಿರೋಧಿ ಎರಡೂ ನೀತಿ ಹೊಂದಿರುವ ದೇಶಗಳಿವೆ. ಭಾರತ ಎರಡೂ ಬಣಗಳ ಸಮತೋಲನಗೊಳಿಸುವ ನೀತಿ ಹೊಂದಿದೆಯೆ ಅಥವಾ ಸಾಮ್ರಾಜ್ಯಶಾಹಿ-ವಿರೋಧಿ ನೀತಿ ಹೊಂದಿದೆಯೆ? ಎ. ಐ. ಸಿ. ಸಿ. ನಿರ್ಣಯ ಮತ್ತು ವಿದೇಶ ಮಂತ್ರಿಯ ಹೇಳಿಕೆ ನೋಡಿದರೆ ಭಾರತ ಸರ್ಕಾರ ಸುಸಂಗತವಾದ ಸಾಮ್ರಾಜ್ಯಶಾಹಿ ವಿರೋಧಿ ಅಲಿಪ್ತ ನೀತಿ ಅನುಸರಿಸುವಂತೆ ಕಾಣುವುದಿಲ್ಲ.

ಉಳಿದೆರಡು ನಿರ್ಣಯಗಳನ್ನು ಗಮನಿಸಿದರೆ, ಆಳುವ ಪಕ್ಷದ ನಾಯಕರು ಯಾವ ಲೋಕದಲ್ಲಿದ್ದಾರೆ ಎಂದು ಆಶ್ಚರ್ಯ ಪಡದಿರಲು ಸಾಧ್ಯವಿಲ್ಲ.

[ಮುಂದುವರೆಯುವುದು]

ರೈತಸಂಘದ ಕಚೇರಿ ಉದ್ಘಾಟನೆ

ಕೊಡಗು ಜಿಲ್ಲೆಯ ಸಿದ್ಧಾಪುರದ ಗುಹ್ಯಗ್ರಾಮದ ಗೂಡುಗದ್ದೆಯಂಬಲ್ಲಿ ತಾ. 14-12-80ರಂದು ರೈತಸಂಘದ ಕಚೇರಿಯನ್ನು ತೆರೆಯಲಾಯಿತು. ಕಚೇರಿಯ ಉದ್ಘಾಟನೆಯನ್ನು ಕೊಡಗು ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಹೆಚ್.ಎಸ್. ಗಣೇಶರವರಿಂದ ಉದ್ಘಾಟನೆ ಮಾಡಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ಸಿದ್ಧಾಪುರ ಸಿ ಪಿ ಐ (ಎಂ) ಶಾಖೆಯ ಕಾರ್ಯದರ್ಶಿ ಕಾಂ. ಬಾಪುಟ್ಟಿಯವರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾರ್ಮಿಕ ಹಾಗೂ ರೈತ ಮುಖಂಡರಾದ ಕಾಂ. ಅನಿ, ಕಾಂ. ಕಟ್ಟಪ್ಪ, ಕಾಂ. ಕೆ.ಎಂ. ಮಂದಣ್ಣ, ಕಾಂ. ರವಿ, ಕಾಂ. ಗಣೇಶ, ಕಾಂ. ಲಕ್ಷ್ಮಿ ಭಾಷಣ ಮಾಡಿದರು. ಮತ್ತು ಎ.ಕೆ.ಜಿ. ಕ್ಲಬ್ಬಿನ ಸದಸ್ಯರು ಕ್ರಾಂತಿಯ ಗೀತೆಯನ್ನು ಹಾಡಿದರು. ಈ ಸಭೆಗೆ ಸಿದ್ಧಾಪುರ ಶಾಖೆಯ ನೇತೃತ್ವದಲ್ಲಿ 200 ಕಾರ್ಮಿಕರು ಮತ್ತು ರೈತರು ಮಹಿಳೆಯರಿಂದ ಕೂಡಿದ ಮೆರವಣಿಗೆಯನ್ನು ತೆಗೆಯಲಾಯಿತು. ರಾತ್ರಿ 8ಗಂಟೆಯ ಮೇಲೆ ಗೂಡುಗದ್ದೆಯ ಬಾಲಸಂಘದ ವತಿಯಿಂದ ಶಕ್ತಿಯೆಂಬ ಕ್ರಾಂತಿಕಾರಿಯಾದ ನಾಟಕವನ್ನು ಏರ್ಪಡಿಸಲಾಯಿತು. ಕೊನೆಗೆ ರೈತಸಂಘದ ಕಾರ್ಯದರ್ಶಿಯಾದ ಕಾಂ. ಹೆಚ್. ಎಸ್. ಗಣೇಶರವರು ರೈತಸಂಘದ ಪರವಾಗಿ ಅಭಿನಂದನೆಯನ್ನು ಅರ್ಪಿಸಿದರು.

ದಕ್ಷಿಣ ಅಮೇರಿಕಾ ಖಂಡ, ಮೆಕ್ಸಿಕೋ ಹಾಗೂ ಪನಾಮಾದ ಕಮ್ಯುನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳ ಸಮ್ಮೇಳನವೊಂದು ಅಕ್ಟೋಬರ್ 1ರಿಂದ 3ರ ನಡುವೆ ದಕ್ಷಿಣ ಅಮೇರಿಕಾದ ಯಾವುದೋ ಒಂದು ಸ್ಥಳದಲ್ಲಿ ನಡೆಯಿತು. ಸಮ್ಮೇಳನದ ನಂತರ ಈ ಕ್ಷೇತ್ರದ ರಾಜಕೀಯ ಸ್ಥಿತಿಯ ವಿವರವಾದ ವಿಶ್ಲೇಷಣೆಯನ್ನೊಳಗೊಂಡ ಜಂಟೀ ಘೋಷಣೆಯನ್ನು ಹೊರಡಿಸಲಾಯ್ತು. ಆ ದಾಖಲೆಯ ಪೂರ್ಣಪಾಠ ಹೀಗಿದೆ:

"ಬಂಡವಾಳಶಾಹಿಯ ಸಾರ್ವತ್ರಿಕ ಬಿಕ್ಕಟ್ಟಿನ ಚೌಕಟ್ಟಿನೊಳಗೆ ದಕ್ಷಿಣ ಅಮೇರಿಕಾದ ಸದ್ಯದ ಪರಿಸ್ಥಿತಿಯ ಕೆಲವು ಮುಖ್ಯ ಲಕ್ಷಣಗಳನ್ನು ಕಾಣಬಹುದು-ಒಂದೆಡೆ ಸಾಮ್ರಾಜ್ಯಶಾಹೀ ಹಾಗೂ ಬೂರ್ಜ್ವಾ-ಭೂಮಾಲೀಕ ಅಧಿಕಾರ ಕ್ರಮೇಣ ಕುಸಿಯುತ್ತಿದೆ; ಇನ್ನೊಂದೆಡೆ ಜನಪ್ರಿಯ ಹಾಗೂ ಪ್ರಜಾಸತ್ತಾತ್ಮಕ ಹೋರಾಟಗಳ ಅದಮ್ಯ ಬೆಳವಣಿಗೆ ಕಂಡುಬರುತ್ತಿದೆ. ಈ ಹೋರಾಟಗಳಲ್ಲಿ ಹೆಚ್ಚೆಚ್ಚು ಜನಸಾಮಾನ್ಯರು ಸೇರಿಕೊಳ್ಳುತ್ತಿದ್ದಾರೆ; ಇವರೆಲ್ಲಾ ತಮ್ಮ ಹೆಗಲ ಮೇಲಿನ ಹೊರೆಯನ್ನು ಬದಿಗೆ ತಳ್ಳಿ ಹಾಕಿ ತಮ್ಮ ಅದೃಷ್ಟವನ್ನು ತಾವೇ ರೂಪಿಸುವ ಹಕ್ಕು ಪಡೆಯಲು ದೃಢ ನಿರ್ಧಾರ ಮಾಡಿದ್ದಾರೆ

ಮಾಲಾದಲ್ಲಿ ಕಳೆದ ದಶಕಗಳ ಸಂಕಷ್ಟಗಳ ನಡುವಿನಿಂದ ಕ್ರಾಂತಿಕಾರೀ ಹಾಗೂ ಜನಪ್ರಿಯ ಚಳುವಳಿಗಳು ಮೂಡಿಬರುತ್ತಿವೆ. ಸದ್ಯದ ಸಾಮೂಹಿಕ ನರಹತ್ಯೆಯೂ ರಾಷ್ಟ್ರೀಯ ಹಾಗೂ ಸಾಮಾಜಿಕ ಉದ್ಧಾರಕ್ಕಾಗಿ ಹೋರಾಡಬೇಕೆಂಬ ಛಲದ ನಿರ್ಧಾರವನ್ನು ಅಲುಗಾಡಿಸಲು ಶಕ್ಯವಾಗಿಲ್ಲ.

ಕೋಸ್ಟಾರಿಕಾ ಹಾಗೂ ಹೊಂಡೂರಸ್‌ನಲ್ಲಿ ಪ್ರತಿಕ್ರಿಯಾವಾದೀ ಶಕ್ತಿಗಳು ಜನಪ್ರಿಯ ಚಳುವಳಿಗಳನ್ನು ಹತ್ತಿಕ್ಕಲು ದಮನಕಾರೀ ಹಿಂಸಾವಿಧಾನಗಳನ್ನು ಪಯೋಗಿಸುತ್ತಿದ್ದರೂ ಈ ಚಳುವಳಿಗಳು ಇತ್ತೀಚೆಗೆ ಪ್ರತಿಕ್ರಿಯಾವಾದೀ ಶಕ್ತಿಗಳ ವಿರುದ್ಧ ದೊಡ್ಡ ವಿಜಯ ಪಡೆದಿವೆ.

ಯಾಂಕೀ (ಅಮೇರಿಕಾದ) ಸಾಮ್ರಾಜ್ಯಶಾಹೀ ದಕ್ಷಿಣ ಅಮೇರಿಕಾದ ಜನತೆಯ ವಿಮೋಚನೆಯ ಪ್ರಕ್ರಿಯೆಯನ್ನು ತಡೆಯಲು ಎಲ್ಲಾ ರೀತಿಯ ಪ್ರಯತ್ನ ಹಾಗೂ ಕಸರತ್ತುಗಳನ್ನು ಮಾಡುತ್ತಿದೆ; ಸಾಮೂಹಿಕ ಹತ್ಯೆಗೆ ಪ್ರೋತ್ಸಾಹ ಕೊಡುತ್ತಿದೆ; ಸೊಮೋಜಾ ರೀತಿಯ ಪ್ರತಿಕ್ರಿಯಾವಾದಿಗಳಿಗೆ ಉತ್ತೇಜನ ನೀಡುತ್ತಿದೆ, ತನ್ನ ಸೈನಿಕ ಸಲಹೆಗಾರರು ಹಾಗೂ ಶಸ್ತ್ರಾಸ್ತ್ರಗಳೊಂದಿಗೆ ಸೈನಿಕ ಹಾಗೂ ರಾಜಕೀಯ ಹಸ್ತಕ್ಷೇಪವನ್ನು (ಎಲ್

ಈ ರೀತಿ ಸಾಲ್ವಡೋರ್‌ನ ಜನತೆ ತಮ್ಮ ವಿಮೋಚನೆಗಾಗಿ ವೀರಾವೇಶದಿಂದ ಹೋರಾಡುತ್ತಿರುವಾಗ ಅವರ ಮೇಲೆ ಧಾಳಿ ನಡೆಸುವ ಹೊಲಸು ಕೆಲಸವನ್ನು ಬೇರೆಯವರಿಗೆ ಹಚ್ಚಲು ವಾಶಿಂಗ್ಟನ್ ಪ್ರಯತ್ನಿಸುತ್ತಿದೆ; ಇಳಿಮುಖವಾಗುತ್ತಿರುವ ತನ್ನ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ಹಾಗೂ ತನ್ನ ಅಪರಾಧೀ ಸ್ವಭಾವವನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದೆ. ಆದರೆ ಲ್ಯಾಟೀನ್ ಅಮೇರಿಕಾದ ದೇಶಗಳಲ್ಲಿ ಹಲವು ಬಾರಿ ಬಂದೂಕಿನ ನಳಿಕೆಗಳ ಮೂಲಕ ಪ್ರದರ್ಶಿಸಿದ ಅದರ ಕ್ರಿಮಿನಲ್ ಬುದ್ಧಿ ಈಗಲೂ ಹಾಗೇ ಇದೆ.

ದಕ್ಷಿಣ ಅಮೇರಿಕಾದ ಪ್ರತಿಕ್ರಿಯಾವಾದೀ ಶಕ್ತಿಗಳು, ವಿಶೇಷವಾಗಿ ಗ್ವಾಟೆಮಾಲಾ ಹಾಗೂ ಎಲ್‌ಸಾಲ್ವಡೋರ್ ದೇಶಗಳ ಇಂತಹ ಶಕ್ತಿಗಳು ಈಗಿನ ಬಿಕ್ಕಟ್ಟಿನ ಸ್ಥಿತಿಗೆ ಒಂದೇ ಒಂದು ಪರಿಹಾರವನ್ನು ಮಾತ್ರ ಒಪ್ಪಿಕೊಳ್ಳಲು ಸಿದ್ಧರಿದ್ದಾರೆ ಅದೆಂದರೆ ತಮ್ಮ ಜನಸಾಮಾನ್ಯರ ಅಭಿಲಾಷೆಗಳನ್ನು ಹತ್ತಿಕ್ಕಿ ನರಹತ್ಯೆ ನಡೆಸಿ ಹಳೆಯ ಅನ್ಯಾಯದ ಹಾಗೂ ಈಗಾಗಲೇ ತಿರಸ್ಕರಿಸಲ್ಪಟ್ಟ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದು ಇದನ್ನು ಬಿಟ್ಟು ಬೇರೆ ಯಾವ ಪರಿಹಾರವೂ ಈ

ರಿಂದಾಗಿ ಹಳ್ಳಿ, ಪಟ್ಟಣಗಳಲ್ಲಿನ ಸಾಮೂಹಿಕ ಚಳುವಳಿಗಳು ಒಂದುಗೂಡಲು ಹಾಗೂ ಮಾರ್ಕ್ಸ್‌ವಾದಿಗಳು, ಕ್ರಿಶ್ಚಿಯನ್ನರು, ಪಾದ್ರಿಗಳು, ಸಾಮಾನ್ಯಜನರು, ನಾಗರಿಕ ಅಧಿಕಾರಿಗಳು, ಸೈನಿಕರು ಇತ್ಯಾದಿ ಪ್ರಜಾಪ್ರಭುತ್ವವಾದೀ ಹಾಗೂ ದೇಶಪ್ರೇಮೀ ಶಕ್ತಿಗಳನ್ನು ಮರುಸಂಘಟಿಸಲು ಸಹಾಯಕವಾಗಿದೆ. ರಾಜಕೀಯ-ಸೈನಿಕ ಕ್ರಾಂತಿಕಾರೀ ಸಂಘಟನೆಗಳನ್ನು ಒಗ್ಗೂಡಿಸುವ "ಫರಬುಂದೋ ಮಾರ್ತಿ ರಾಷ್ಟ್ರೀಯ ವಿಮೋಚನಾ ರಂಗ", ಇದನ್ನು ಪ್ರಜಾಪ್ರಭುತ್ವವಾದೀ ಹಾಗೂ ದೇಶಪ್ರೇಮೀ ಶಕ್ತಿಗಳ (ಸೈನಿಕ ಶಕ್ತಿ ಪಡೆಯದ ಸಂಘಟನೆಗಳೂ ಸೇರಿದಂತೆ) ಸಂಘಟನೆಗಳೊಂದಿಗೆ ಸಂಪರ್ಕಿಸುವ "ಪ್ರಜಾಸತ್ತಾತ್ಮಕ ಕ್ರಾಂತಿಕಾರೀ ರಂಗ" ಈ ಎರಡೂ ಐಕ್ಯ ಸಂಘಟನೆಗಳು ಭವಿಷ್ಯದಲ್ಲಿ ಸಾಲ್ವಡೋರ್‌ನ ಜನತೆ ಪಡೆಯಲಿರುವ ಐಕ್ಯತೆಯ ಅಭಿವ್ಯಕ್ತಿ ಹಾಗೂ ಬರಲಿರುವ ವಿಜಯದ ಹಾದಿಯಲ್ಲಿ ಒಂದು ಬಹುಮುಖ್ಯ ಸಾಧನೆಯಾಗಿದೆ.

ಗ್ವಾಟೆಮಾಲಾದಲ್ಲೂ ಕ್ರಾಂತಿಕಾರೀ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳ ನಡುವೆ ಐಕ್ಯತೆಯ ಪ್ರಕ್ರಿಯೆ ಆರಂಭವಾಗಿದೆ ಹಾಗೂ ಮುಂದುವರಿಯುತ್ತಿದೆ, ಗ್ವಾಟೆಮಾಲಾದ

ಸಾಮ್ರಾಜ್ಯಶಾಹೀ ಆಕ್ರಮಣವನ್ನು ತಡೆಗಟ್ಟಲು ಶ್ರಮಿಸುತ್ತೇವೆ ಹಾಗೂ ಇಂತಹ ಆಕ್ರಮಣ ನಡೆದರೆ ಅದರ ವಿರುದ್ಧ ಬಲವಾದ ಹೋರಾಟ ನಡೆಸಬೇಕೆಂದು ಎಲ್ಲಾ ಜನರನ್ನು ಕೇಳಿಕೊಳ್ಳುತ್ತೇವೆ.

ಕೋಸ್ಟಾರಿಕಾ ಮತ್ತು ಹೊಂಡೂರಸ್

ಕೋಸ್ಟಾರಿಕಾದಲ್ಲಿ "ಸಂಯುಕ್ತ ಜನತಾ ಚಳುವಳಿ" ಹಾಗೂ ಹೊಂಡೂರಸ್‌ನಲ್ಲಿ 'ದೇಶಪ್ರೇಮೀ ರಂಗ'ದ ನಾಯಕತ್ವದಲ್ಲಿ ಕ್ರಾಂತಿಕಾರಿ ಹಾಗೂ ಪ್ರಜಾಪ್ರಭುತ್ವವಾದೀ ಐಕ್ಯತೆಯ ಪ್ರಕ್ರಿಯೆ ಆರಂಭವಾಗಿದೆ. ಎರಡೂ ದೇಶಗಳಲ್ಲಿ ಜನಪ್ರಿಯ ಹೋರಾಟಗಳು ಹೆಚ್ಚುತ್ತಿವೆ ಹಾಗೂ ಪ್ರೋತ್ಸಾಹದಾಯಕ ವಿಜಯಗಳೂ ದೊರೆತಿವೆ.

ಕೋಸ್ಟಾರಿಕಾದಲ್ಲಿ ಪ್ರತಿಕ್ರಿಯಾವಾದೀ ಶಕ್ತಿಗಳು ಸರಕಾರವನ್ನು ಕಾರ್ಮಿಕರ ಚಳುವಳಿಯನ್ನು ಬಗ್ಗುಬಡಿಯಲು ಹಿಂಸಾತ್ಮಕ, ದಮನಕಾರೀ ಕ್ರಮಕೈಗೊಳ್ಳುವಂತೆ ಒತ್ತಾಯಿಸುತ್ತಿವೆ.

ಹೊಂಡೂರಸ್‌ನಲ್ಲಿ ಸಾಮ್ರಾಜ್ಯಶಾಹಿಗಳು ಒಂದು ಪ್ರಜಾಪ್ರಭುತ್ವವಾದೀ ಅವಕಾಶವಿರಬೇಕೆಂದು ನಟ

ದಕ್ಷಿಣ ಅಮೇರಿಕಾದಲ್ಲಿ ವಿಮೋಚನಾ ಹೋರಾಟಗಳು

ಕ್ರಾಂತಿಗರ್ಭಿತವಾಗಿದೆ

ಸಾಮ್ರಾಜ್ಯಶಾಹಿ ಹಾಗೂ ಹಿಡಿಯಷ್ಟು ವ್ಯಕ್ತಿಗಳ ಆಳ್ವಿಕೆಯ ಬಿಕ್ಕಟ್ಟಿನ ಸ್ಥಿತಿ ಹಾಗೂ ಜನರ ಹೋರಾಟಗಳ ತೀವ್ರ ಬೆಳವಣಿಗೆ ಬೇರೆ-ಬೇರೆಡೆ ಬೇರೆ-ಬೇರೆ ಮಟ್ಟದ ತೀವ್ರತೆಯನ್ನು ಪ್ರೌಢತೆಯನ್ನು ಗಳಿಸಿಕೊಂಡಿದೆ. ಆದರೆ ಈ ವ್ಯತ್ಯಾಸಗಳ ನಡುವೆಯೂ ಒಂದು ನಿರ್ದಿಷ್ಟ ದಿಕ್ಕಿನ ಕಡೆಗೆ ಚಾರಿತ್ರಿಕ ಒಲವು ತೋರಿಸಿರುವುದು ಕಾಣಿಸುತ್ತದೆ-ಸ್ವಾತಂತ್ರ್ಯ, ನಿಜವಾದ ರಾಷ್ಟ್ರೀಯ ಸ್ವಾಧೀನತೆ ಹಾಗೂ ಸಾಮಾಜಿಕ ನ್ಯಾಯ-ಎಲ್ಲಾ ಹೋರಾಟಗಳಿಗೆ ಇವೇ ನಿರೀಕ್ಷಿತ ಗುರಿಗಳಾಗಿರುವುದು ಕಂಡುಬರುತ್ತದೆ.

ಇತಿಹಾಸದ ಬೇರೆ ಯಾವುದೇ ಸಮಯದಲ್ಲಿದ್ದುದಕ್ಕಿಂತ ಹೆಚ್ಚಾಗಿ ಈಗ ದಕ್ಷಿಣ ಅಫ್ರಿಕಾದ ವಾತಾವರಣ ಕ್ರಾಂತಿಗರ್ಭಿತವಾಗಿದೆ. ಯಾಕೆಂದರೆ ಅದು ಈಗಾಗಲೇ ತನ್ನ ಮೊದಲ ಜನಪ್ರಿಯ ಪ್ರಜಾಸತ್ತಾತ್ಮಕ ಹಾಗೂ ಸಾಮ್ರಾಜ್ಯಶಾಹೀ ವಿರೋಧಿ ಕ್ರಾಂತಿ ನಡೆಸಿದೆ. ನಿಕಾರಗುವಾದ ಸಾಂದಿನಿಸ್ಟಾ ಕ್ರಾಂತಿಯೇ ಅದು.

ಸಾಲ್ವಡೋರ್ ಈಗ ಕ್ರಾಂತಿಯ ಹೊಸ್ತಿಲನ್ನು ಸಮೀಪಿಸುತ್ತಿದೆ. ಗ್ವಾಟೆ

ಸಾಲ್ವಡೋರ್‌ನಲ್ಲಿ ಮಾಡಿದಂತೆ) ಹೆಚ್ಚಿಸುತ್ತಿದೆ, ತನ್ನದೇ ಸೈನ್ಯವನ್ನುಪಯೋಗಿಸಿ ನೇರ ಆಕ್ರಮಣದ ಬೆದರಿಕೆ ಹಾಕುತ್ತಿದೆ; ಅಥವಾ ಇವೆಲ್ಲದರೊಂದಿಗೆ ಸುಧಾರಣಾವಾದೀ ಕಾರ್ಯಕ್ರಮವನ್ನು ಸೇರಿಸಿಕೊಂಡು ಮೋಸ ಮಾಡುತ್ತಿದೆ.

ಸಾಮ್ರಾಜ್ಯಶಾಹೀ ಒತ್ತಡ

1969ರಲ್ಲಿ ಎಲ್‌ಸಾಲ್ವಡೋರ್ ಮತ್ತು ಹೊಂಡೂರಸ್ ನಡುವೆ ನಡೆದ ಯುದ್ಧದ ನಂತರ ಆವೆರಡು ದೇಶಗಳ ನಡುವೆ ಉದ್ಭವವಾದ ತಕರಾರನ್ನು ಪರಿಹರಿಸಬೇಕೆಂದು ಅಮೇರಿಕಾದ ಸರಕಾರ ಒತ್ತಡ ತರುತ್ತಿದೆ. "ದಕ್ಷಿಣ ಅಮೇರಿಕಾದಲ್ಲಿ ಶಾಂತಿ ಸ್ಥಾಪನೆಗಾಗಿ" ಇದು ಎಂಬ ಆಷಾಢಭೂತಿ ಘೋಷಣೆ ಅದರದು. ತಕರಾರನ್ನು ಪರಿಹರಿಸಬೇಕೆಂಬ ಒತ್ತಾಯ ಸೈದ್ಧಾಂತಿಕವಾಗಿ ಒಳ್ಳೆಯದೇ. ಆದರೆ ಇಲ್ಲಿ ಅಮೇರಿಕಾದ ಸಾಮ್ರಾಜ್ಯಶಾಹಿಗಳ ನಿಜವಾದ ಹಾಗೂ ತಕ್ಷಣದ ಉದ್ದೇಶ ಬೇರೆಯೇ ಆಗಿದೆ. ಸಾಲ್ವಡೋರ್‌ನ ಸೈನಿಕ ಫ್ಯಾಸಿಸ್ಟ್ ಆಡಳಿತ ತನ್ನ ಜನರ ಸಾಮೂಹಿಕ ನರಹತ್ಯೆ ನಡೆಸಿ ಅವರ ವಿರುದ್ಧ ಯುದ್ಧವನ್ನು ತೀವ್ರಗೊಳಿಸಲು ಫ್ಯಾಸಿಸ್ಟ್ ಆಡಳಿತಗಾರರಿಗೆ ಹೊಂಡೂರಸ್ ಸೇನೆಯ ಬೆಂಬಲ ಸಿಗುವಂತೆ ಮಾಡುವುದೇ ಆ ಉದ್ದೇಶ.

ಶಕ್ತಿಗಳಿಗೆ ಒಪ್ಪಿಗೆಯಿಲ್ಲ ದಕ್ಷಿಣ ಅಮೇರಿಕಾದ ಪ್ರತಿಕ್ರಿಯಾವಾದಿಗಳು ನಿಕಾರಗುವಾ ಹಾಗೂ ಸಾಲ್ವಡೋರ್‌ನ ಜನರ ಮೇಲೆ ಆಕ್ರಮಣ ನಡೆಸಿ ದಕ್ಷಿಣ ಅಮೇರಿಕಾದಲ್ಲಿ ಯುದ್ಧ ಸ್ಥಿತಿಯನ್ನು ಹೇರುವ ನಿಜವಾದ ಅಪಾಯವಿದೆ.

ಎಲ್‌ಸಾಲ್ವಡೋರ್ ಮತ್ತು ಗ್ವಾಟೆಮಾಲಾ

ಎಲ್‌ಸಾಲ್ವಡೋರ್ ಹಾಗೂ ಗ್ವಾಟೆಮಾಲಾ ದೇಶಗಳ ಜನತೆ ತಮ್ಮ ಹಾದಿಯಲ್ಲಿ ಒಡ್ಡಿದ ಎಲ್ಲಾ ಅಡೆತಡೆಗಳನ್ನು ದಾಟಿ ವಿಜಯದ ಕಡೆಗೆ ದೃಢವಾಗಿ ಮುಂದುವರೆಯುತ್ತಿದ್ದಾರೆ.

ಎಲ್‌ಸಾಲ್ವಡೋರ್‌ನಲ್ಲಿ ವಿಮೋಚನೆಯ ಕಷ್ಟಕರ ಮಾರ್ಗ, ಒಗ್ಗಟ್ಟಾಗಬೇಕೆಂಬ ಜನಸಾಮಾನ್ಯರ ನಿರ್ಧಾರ, ಸಾಂದಿನಿಸ್ಟಾ ಕ್ರಾಂತಿ (ಸಮೀಪದ ನಿಕಾರಗುವಾ ದೇಶದಲ್ಲಿ) ಹಾಗೂ ಸಾಲ್ವಡೋರ್‌ನ ಕಮ್ಯುನಿಸ್ಟ್ ಪಕ್ಷವೂ ಸೇರಿದಂತೆ ಎಲ್ಲಾ ಕ್ರಾಂತಿಕಾರೀ ಸಂಘಟನೆಗಳ ಪ್ರೌಢ ನಾಯಕತ್ವ ಇವು 1980ರಲ್ಲಿ ಎಲ್ಲಾ ಕ್ರಾಂತಿಕಾರೀ ಶಕ್ತಿಗಳನ್ನು ಒಂದುಗೂಡಿಸಿ ಬೆಳೆಸುವಲ್ಲಿ ಸಹಾಯಮಾಡಿವೆ. ಇದ

ಕ್ರಾಂತಿಕಾರೀ ಎಡಪಂಥೀಯರೆಲ್ಲರ ಐಕ್ಯತೆ ಸಾಧಿಸುವಲ್ಲಿ ನಡೆಸುವ ಎಲ್ಲಾ ಪ್ರಯತ್ನಗಳಿಗೆ ನಮ್ಮ ಸ್ವಾಗತ ಹಾಗೂ ಬೆಂಬಲವಿದೆ ಯಾಕೆಂದರೆ ಐಕ್ಯತೆ ಜನರ ಹೋರಾಟ ಮುನ್ನಡೆಯಲು ಹಾಗೂ ವಿಜಯದ ಕಡೆಗೆ ಸಾಗಲು ಬೇಕಾದ ಪರಿಸ್ಥಿತಿ ನಿರ್ಮಿಸುತ್ತದೆ.

ಎಲ್‌ಸಾಲ್ವಡೋರ್ ಹಾಗೂ ಗ್ವಾಟೆಮಾಲಾದಲ್ಲಿ ಜನಸಾಮಾನ್ಯರ ವಿವಿಧ ರಾಜಕೀಯ ಹಾಗೂ ಆರ್ಥಿಕ ಬೇಡಿಕೆಗಳ ಹೋರಾಟದೊಂದಿಗೆ ಕ್ರಾಂತಿಕಾರೀ ಸಶಸ್ತ್ರ ಹೋರಾಟವನ್ನೂ ಸೇರಿಸಿ ಮುಂದುವರಿಯುತ್ತಿರುವುದು ಕ್ರಾಂತಿಯ ಕಡೆಗೆ ಸಾಗುವ ಸರಿಯಾದ ಮಾರ್ಗ. ಯಾಕೆಂದರೆ ಬೇರೆ ಎಲ್ಲಾ ಮಾರ್ಗಗಳು ಮುಚ್ಚಲ್ಪಟ್ಟಿವೆ ಈ ವೀರಹೋರಾಟಕ್ಕೆ ನಮ್ಮ ಬೆಂಬಲವಿದೆ ಹಾಗೂ ಅದರ ಗೆಲುವಿಗಾಗಿ ನಮ್ಮಿಂದಾದ ಎಲ್ಲಾ ಸಹಾಯ ನೀಡುತ್ತೇವೆ.

ಎಲ್‌ಸಾಲ್ವಡೋರ್‌ನ ಕ್ರಾಂತಿಗೆ ಜಯವಾಗುವಂತೆ ಹಾಗೂ ಗ್ವಾಟೆಮಾಲಾದ ಕ್ರಾಂತಿಯು ಹಾದಿಯಲ್ಲಿ ಮುನ್ನಡೆಯುವಂತೆ ಸಾಧ್ಯವಿದ್ದ ಎಲ್ಲಾ ಸಹಾಯ ಒದಗಿಸುವುದು ಎಲ್ಲಾ ಕಮ್ಯುನಿಸ್ಟರ ಹಾಗೂ ಕ್ರಾಂತಿಕಾರಿಗಳ ಆದ್ಯ ಕರ್ತವ್ಯ. ನಾವು

ಸುತ್ತಾ ರಾಜಕೀಯ ಪರಿಸ್ಥಿತಿಯನ್ನು ಸಮತೋಲನಕ್ಕೆ ತರಲು ಪ್ರಯತ್ನಿಸುತ್ತಿದ್ದಾರೆ. ಆದರೆ ಇದೇ ಹೊತ್ತಿನಲ್ಲಿ ಸೇನೆಯನ್ನು ಬಲಗೊಳಿಸಿ ಅದನ್ನು ದಕ್ಷಿಣ ಅಮೇರಿಕಾದ ದೇಶಗಳ ಜನತೆಯ ವಿರುದ್ಧ ದಮನಕ್ಕೆ ಉಪಯೋಗಿಸಲು ಸಾಧ್ಯವಾಗುವ ವಾತಾವರಣ ನಿರ್ಮಿಸಲು ಪ್ರಯತ್ನಿಸುತ್ತಿದೆ. ಸಾಲ್ವಡೋರ್ ಜನತೆಯ ವಿರುದ್ಧ ಹೊಂಡೂರಸ್ ಸೇನೆಯನ್ನು ಉಪಯೋಗಿಸುತ್ತಿರುವುದು, ನಿಕಾರಗುವಾದ ಜನರ ವಿರುದ್ಧ ಸೊಮೋಜಾನ "ರಾಷ್ಟ್ರೀಯ ಪಡೆ"ಗಳು ನಡೆಸುತ್ತಿರುವ ಕ್ರಿಮಿನಲ್ ಚಟುವಟಿಕೆಗಳಿಗೆ ಹೊಂಡೂರಸ್ ಸೇನೆಯ ಬೆಂಬಲ ಇವು ತೀರಾ ಅಪಾಯಕಾರಿ.

ನಿಕಾರಗುವಾದಲ್ಲಿ ಮಹಾನ್ ಸಾಂದಿನಿಸ್ಟಾ ಕ್ರಾಂತಿ ಬಲಗೊಳ್ಳುತ್ತಿದೆ; ದೇಶವನ್ನು ಪುನಃ ಕಟ್ಟುವ ಕೆಲಸ ಮುಂದುವರಿಯುತ್ತಿದೆ; ಕೇವಲ ಒಂದೇ ವರ್ಷದಲ್ಲಿ ನಿರಕ್ಷರತೆಯ ಹಳೇ ಸಮಸ್ಯೆ ಪರಿಹಾರವಾಗಿದೆ; ಇನ್ನೂ ತೀವ್ರವಾದ ಸಾಮಾಜಿಕ ಸಮಸ್ಯೆಗಳನ್ನೆದುರಿಸಲು ಪ್ರಾರಂಭದ ಕೆಲಸಗಳು ನಡೆದಿವೆ; ಪ್ರತಿಕ್ರಾಂತಿಕಾರಿಗಳನ್ನು ಸೋಲಿಸಿ ಕ್ರಾಂತಿಯನ್ನು ರಕ್ಷಿಸಿಕೊಳ್ಳಲು ಜನಸಾಮಾನ್ಯರನ್ನೇ ಸಂಪೂರ್ಣ ಒಳಗೊಂಡಿರುವ ರಕ್ಷಣಾ ವ್ಯವಸ್ಥೆ ರಚಿಸಲಾಗುತ್ತಿದೆ.

ಕೆರೀಬಿಯನ್ ಕ್ಷೇತ್ರದಲ್ಲಿ

ದಕ್ಷಿಣ ಅಮೇರಿಕಾದ ಪರಿಸ್ಥಿತಿಯಲ್ಲಿ ಬಹಳ ಮಹತ್ವದ ಅಂಶವೆಂದರೆ ಕೆರೀಬಿಯನ್ ಕ್ಷೇತ್ರದಲ್ಲಿನ ಬೆಳವಣಿಗೆಗಳು. ಇಲ್ಲಿ ಸಾಮ್ರಾಜ್ಯಶಾಹಿ ಹಾಗೂ ಅತೀ ತೀವ್ರ ಪ್ರತಿಕ್ರಿಯಾವಾದಿ ಶಕ್ತಿಗಳ ಪ್ರಗತಿವಿರೋಧೀ ಕ್ರಮಗಳ ವಿರುದ್ಧ ಹೋರಾಟದಲ್ಲಿ ಕ್ರಾಂತಿಕಾರಿ ಒಲವುಗಳು ಹಾಗೂ ಜನಪ್ರಿಯ ಸಾಧನೆಗಳು ಬಲಗೊಳ್ಳುತ್ತಿವೆ.

ಕ್ಯೂಬಾದ ಮಹಾನ್ ಕ್ರಾಂತಿಯ ಗೆಲವು ನಮ್ಮ ಜನರ ಚರಿತ್ರೆಯಲ್ಲಿ ಒಂದು ಮಹತ್ವದ ತಿರುವು. ಎರಡು ದಶಕಗಳ ದಿಗ್ಬಂಧನದ ನಂತರವೂ ಕ್ಯೂಬಾ ಜನತೆಯ ಹಿತಾಸಕ್ತಿಗನುಗುಣವಾಗಿ, ಸಮಾಜವನ್ನು ಮತ್ತೊಮ್ಮೆ ಹಳೆಯ ವಿಧಾನಕ್ಕೊಯ್ಯದಂತೆ ಸಂಪೂರ್ಣವಾದ ಮರುವ್ಯವಸ್ಥೆಯನ್ನು ಕೈಗೊಳ್ಳಲು ಸಾಧ್ಯತೆ (ಇದು ಕೇವಲ ಕ್ರಾಂತಿಯಿಂದಲೇ ಸಾಧ್ಯ) ಎಂಬ ಉಪಯೋಗಿ ಪಾಠ ಕಲಿಸುವ ಉತ್ತಮ ಉದಾಹರಣೆಯಾಗಿದೆ. ಅಲ್ಲದೆ ಅದುವರೆಗೆ ಅಜ್ಞಾನ, ಬಡತನದಲ್ಲಿ ತಳ್ಳಲ್ಪಟ್ಟು ದಮನಕ್ಕೊಳಗಾದ ಹಾಗೂ ಶೋಷಿತ ಜನತೆ ಸಮಾಜವಾದದ ಆಧಾರದ ಮೇಲೆ ಅಂತರಾಷ್ಟ್ರೀಯ ವಿಷಯಗಳಲ್ಲಿ ಚಾರಿತ್ರಿಕ ಪಾತ್ರ ವಹಿಸಬಹುದೆಂಬುದಕ್ಕೂ ಕ್ಯೂಬಾ ಉದಾಹರಣೆಯಾಗಿದೆ.

ಕ್ಯೂಬಾ ಕ್ರಾಂತಿಯ ನಂತರ ಅಮೇರಿಕಾ ಖಂಡದ ಎರಡು ಮುಖ್ಯ ಹಾಗೂ ಪ್ರಭಾವಕಾರೀ ಘಟನೆಗಳೆಂದರೆ ಗ್ರೆನಡಾ ಹಾಗೂ ನಿಕಾರಗುವಾದ ಕ್ರಾಂತಿಗಳು. ಅವು ನಮ್ಮ ಜನರ ಶತಸಿದ್ಧವಾದ ವಿಮೋಚನೆಯತ್ತ ದೀರ್ಘವಾದ ಹಾಗೂ ಕಷ್ಟಕರವಾದ ಪ್ರಯಾಣದ ಮುಂದುವರಿಕೆಯಾಗಿದೆ. ಪನಾಮಾ ಕಾಲುವೆಯ ಮೇಲೆ ಪರಮಾಧಿಕಾರ ಪಡೆಯುವಲ್ಲಿ ಪನಾಮಾ ದೇಶದ ಜನರ ಯಶಸ್ಸನ್ನು ನಿರರ್ಥಕಗೊಳಿಸಲು ಅಮೇರಿಕಾ ಸಂಯುಕ್ತ ಸಂಸ್ಥಾನ (ಯು.ಎಸ್.ಎ) ತೋರಿಜೋಸ್-ಕಾರ್ಟರ್ ಸಂಧಿಗಳನ್ನು ಮುರಿಯುವುದರ ಮೂಲಕ ಪ್ರಯತ್ನಿಸುತ್ತಿದೆ. ಅಲ್ಲಿನ ತೀವ್ರ ಪ್ರತಿಕ್ರಿಯಾವಾದಿ ಶಕ್ತಿಗಳು ಈ ಸಂಧಿಗಳನ್ನು ಹಿಂತೆಗೆದುಕೊಳ್ಳಬಯಸುತ್ತಿವೆ. ಪನಾಮಾದ ಕಮ್ಯುನಿಸ್ಟರು ಹಾಗೂ ಎಲ್ಲಾ ಪ್ರಗತಿಶೀಲ ಶಕ್ತಿಗಳು ತಮ್ಮಲ್ಲಿನ ಪ್ರಜಾಪ್ರಭುತ್ವಕ್ಕೆ ಹೆಚ್ಚು ಜನಪ್ರಿಯ ರೂಪ ಕೊಡುವುದರೊಂದಿಗೇ ತಮ್ಮ ಗೆಲುವನ್ನು ಸಾಮ್ರಾಜ್ಯಶಾಹಿಗಳು ಹಾಗೂ ಪ್ರತಿಕ್ರಿಯಾವಾದಿಗಳಿಂದ ರಕ್ಷಿಸಲು ತಮ್ಮೆಲ್ಲಾ ಭೇದಗಳನ್ನು ಮರೆತು ಒಂದಾಗುತ್ತಿದ್ದಾರೆ.

ಸದ್ಯ ಆರ್ಥಿಕ ಬೂರ್ಜ್ವಾ ವರ್ಗ ಉನ್ನತಿ ಹೊಂದುತ್ತಿರುವ ಹಾಗೂ ಗುತ್ತೇದಾರೀ ಸಂಸ್ಥೆಗಳ ಅಧಿಕಾರವಿರುವ ಮೆಕ್ಸಿಕೋದಲ್ಲಿ ಎರಡು ಮುಖ್ಯ ಕಾರಣಗಳಿಂದಾಗಿ ಒಂದು ರಾಜಕೀಯ ಸುಧಾರಣೆ ಜಾರಿಯಾಯಿತು. ಆ ಎರಡು ಮುಖ್ಯ ಅಂಶಗಳೆಂದರೆ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಜನತೆಯ ಹೋರಾಟ ಹಾಗೂ ತಾನು ನಿರಂತರವಾಗಿ ಕೈಗೊಳ್ಳುತ್ತಿದ್ದ ದಮನಕಾರೀ ಕ್ರಮಗಳಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕೆಂದು ಪ್ರಭುತ್ವದ ಅಧಿಕಾರಶಾಹಿಗೆ ಮನವರಿಕೆಯಾದದ್ದು. ಈ ರಾಜಕೀಯ ಸುಧಾರಣೆಯ ಕ್ರಮಗಳು ಈಗ ಕೊನೆಯಾಗಿವೆ. ಹಾಗೂ ಈಗ ಕಾರ್ಮಿಕವರ್ಗ ಹಾಗೂ ಇತರ ಜನಪರ ಶಕ್ತಿಗಳು ತಮ್ಮ ಜೀವನ ಮಟ್ಟದ ಮೇಲೆ ನಡೆಯುತ್ತಿರುವ ದೊಡ್ಡ ಧಾಳಿಯೊಂದನ್ನು ಎದುರಿಸುತ್ತಿದ್ದಾರೆ; ರಾಜಕೀಯ ಜೀವನದಲ್ಲಿ ಹೊಸ ಪ್ರಜಾಸತ್ತಾತ್ಮಕ ಬದಲಾವಣೆಗಾಗಿ ಹೋರಾಡುತ್ತಿದ್ದಾರೆ. ತಮ್ಮ ದೇಶದ ಭವಿಷ್ಯದ ಮೇಲೆ ತಾವು ಹೆಚ್ಚೆಚ್ಚು ಪ್ರಭಾವಬೀರಲು ಸಾಧ್ಯವಾಗುವಂತೆ ಮಾಡಲು ಕಾರ್ಮಿಕ ಸಂಘಗಳ ಸ್ವಾತಂತ್ರ್ಯ ಹಾಗೂ ಜನತೆ ಮತ್ತು ಕ್ರಾಂತಿಕಾರೀ ಸಂಘಟನೆಗಳು ಸ್ವತಂತ್ರ ಕ್ರಮಕೈಗೊಳ್ಳಲು ಇರಬೇಕಾದ ಅವಕಾಶಗಳ ಮೇಲೆ ಅವರು ಹೆಚ್ಚು ಒತ್ತು ಕೊಡುತ್ತಿದ್ದಾರೆ. ಈ ರೀತಿ ಕ್ರಾಂತಿ ಮತ್ತು ಸಮಾಜವಾದದ ಬಗ್ಗೆ ಅವರ ದೃಷ್ಟಿಕೋಣ ಉತ್ತಮಗೊಳ್ಳುತ್ತಿದೆ.

ಹೈತಿಯಲ್ಲಿ ಜನರು ದುಷ್ಟ ಮತ್ತು ಹಳೇ ಬುದ್ಧಿಯ ದುವಾಲಿಯರ ಆಡಳಿತವನ್ನು ಕಿತ್ತೊಗೆಯಲು ಎದ್ದು ನಿಂತಿದ್ದಾರೆ.

ಜಮೈಕಾದಲ್ಲಿ ಪ್ರಜಾಸತ್ತಾತ್ಮಕ ಹಾಗೂ ಪ್ರಗತಿಶೀಲ ಮ್ಯಾನ್ಲೆಯ ಪರ ಸರಕಾರ ಸಾಮ್ರಾಜ್ಯಶಾಹಿಗಳ ಉತ್ತೇಜನೆಯಿಂದ ಪ್ರತಿಕ್ರಿಯಾವಾದಿಗಳು ನಡೆಸುತ್ತಿರುವ ಧಾಳಿಯನ್ನು ಹಿಮ್ಮೆಟ್ಟಿಸಲು ಹೋರಾಡುತ್ತಿದೆ. (ಈ ಜಂಟೀ ಘೋಷಣೆ ಸ್ವೀಕರಿಸಲ್ಪಟ್ಟ ನಂತರ ಮ್ಯಾನ್ಲೆ ಸರಕಾರದ ಸ್ಥಾನದಲ್ಲಿ ಒಂದು ಪ್ರತಿಕ್ರಿಯಾವಾದಿ ಸರಕಾರ ಅಧಿಕಾರಕ್ಕೆ ಬಂದಿದೆ-ಸಂಪಾದಕ) ಪ್ಯೂಟೋರಿಕೋ ಹಾಗೂ ಬೆಲೀಜ್‌ನ ಜನತೆ ಸ್ವಾತಂತ್ರ್ಯ ಹಾಗೂ ತಮ್ಮ ಕ್ಷೇತ್ರದ ಮೇಲೆ ಪರಮಾಧಿಕಾರ ಪಡೆಯಲು ಹೆಣಗುತ್ತಿದೆ; ಕೆರೀಬಿಯನ್ ಕ್ಷೇತ್ರದಲ್ಲಿ ವಸಾಹತುಶಾಹೀ ವ್ಯವಸ್ಥೆ ಕೊನೆಯಾಗುತ್ತಿದೆ.

ಕಮ್ಯುನಿಸ್ಟರ ಪಾತ್ರ

ನಾವು, ಕಮ್ಯುನಿಸ್ಟರು, ಸಮಾಜವಾದ ಹಾಗೂ ಸಮತಾವಾದಕ್ಕಾಗಿ ಹೋರಾಡುತ್ತೇವೆ. ಆದರೆ ಈ ಮಹತ್ತರ ಉದ್ದೇಶಗಳ ಕಡೆಗೆ ಮುನ್ನಡೆಯಬೇಕಾದರೆ ಇರುವ ಒಂದೇ ದಾರಿಯೆಂದರೆ ಜನಪ್ರಿಯ ಹಾಗೂ ಪ್ರಜಾಸತ್ತಾತ್ಮಕ ಹೋರಾಟಗಳನ್ನು ಬಲಗೊಳಿಸುವುದು ಮತ್ತು ಪ್ರಜಾಪ್ರಭುತ್ವವಾದೀ ಹಾಗೂ ಸಾಮ್ರಾಜ್ಯಶಾಹೀ ವಿರೋಧೀ ಕ್ರಾಂತಿಗಾಗಿ ಕ್ರಾಂತಿಕಾರೀ ಶಕ್ತಿಗಳನ್ನು ಬಲಗೊಳಿಸುವುದು ಹಾಗೂ ಒಂದುಗೂಡಿಸುವುದು ಎಂದು ಅರಿತಿದ್ದೇವೆ. ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಹಾಗೂ ಪ್ರಗತಿಗಾಗಿ ನಡೆಸುವ ಹೋರಾಟ ಸಮಾಜವಾದ ಹಾಗೂ ಸಮತಾವಾದಕ್ಕಾಗಿ ನಡೆಸುವ ಹೋರಾಟದ ಅಭಿನ್ನ ಅಂಗ. ಆದ್ದರಿಂದಲೇ ನಾವು ಇಂತಹ ಹೋರಾಟಗಳ ಪರವಹಿಸುತ್ತೇವೆ ಮತ್ತು ಅವನ್ನು ಜಯಿಸುವವರೆಗೂ ಮುಂದುವರೆಸುವ ಹಾಗೂ ತಮ್ಮ ಹೋರಾಟದ ಫಲವನ್ನು ರಕ್ಷಿಸಿಕೊಳ್ಳಲು ದೃಢ ನಿರ್ಧಾರ ಮಾಡಿರುವವರ ಅಭಿಪ್ರಾಯವನ್ನು ಒಪ್ಪುತ್ತೇವೆ.

ಅಮೇರಿಕಾ ಸಂಯುಕ್ತ ಸಂಸ್ಥಾನ ಮತ್ತೆ ಶೀತಲಯುದ್ಧ ಆರಂಭಿಸಿರುವುದು, ಬೆದರಿಕೆಹಾಕಿ ಮೋಸಗೊಳಿಸುವ ಆಕ್ರಮಣಕಾರೀ ನಿಲುವು ತಳೆದಿರುವುದು, ದಕ್ಷಿಣ ಅಮೇರಿಕಾ ಕ್ಷೇತ್ರದಲ್ಲಿ ಸೈನಿಕ ನೆಲೆಗಳ ಸ್ಥಾಪನೆಯಾಗಿರುವುದು ಹಾಗೂ ಆಕ್ರಮಣಕಾರೀ ಸೈನಿಕ ಜಮಾವಣೆ ನಡೆಸುತ್ತಿರುವುದು ಇವೆಲ್ಲದರಿಂದ ಉಂಟಾಗಿರುವ ತೀವ್ರ ಅಪಾಯಕಾರೀ ಸ್ಥಿತಿಯ ಬಗ್ಗೆ ದಕ್ಷಿಣ ಅಮೇರಿಕಾ, ಮೆಕ್ಸಿಕೋ ಹಾಗೂ ಪನಾಮಾದ ಕಮ್ಯುನಿಸ್ಟರು ನಮ್ಮ ಜನತೆಯನ್ನು ಎಚ್ಚರಿಸುತ್ತೇವೆ. ತಮ್ಮ ಜನರ ವಿಮೋಚನೆಯ ಉದ್ದೇಶ ಸಾಧಿಸಲು ತಮ್ಮ ಹೋರಾಟಗಳನ್ನು ಒಂದುಗೂಡಿಸಬೇಕೆಂದು ನಮ್ಮ ದೇಶಗಳ ಕ್ರಾಂತಿಕಾರೀ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೆ ಕರೆಕೊಡುತ್ತೇವೆ.

ಐಕ್ಯತೆಯ ಬೆಳವಣಿಗೆ, ಕಾರ್ಮಿಕರ ಹಾಗೂ ರೈತರ ಚಳುವಳಿಗಳ ಜಂಟಿಹೋರಾಟ, ಕಾರ್ಮಿಕ, ರೈತರ ನಡುವೆ ನಿಕಟ ಸಖ್ಯತೆ ಹಾಗೂ ಅವರ ಕ್ರಾಂತಿಕಾರೀ ಶಿಕ್ಷಣ ಇವು ಪ್ರತಿಯೊಂದು ಜನಪರ ಹೋರಾಟದ ಬಲ, ವ್ಯಾಪಕತೆ ಹಾಗೂ ಹರಹಿನ ಮುಖ್ಯ ಗ್ಯಾರಂಟಿ.

ಅತೀ ಮುಖ್ಯ ಸಮಯ

ಜನರೊಂದಿಗಿದ್ದು ಹೋರಾಡಬೇಕೆಂದು ಪಾದ್ರಿಗಳ ನಡುವೆ ಹರಡುತ್ತಿರುವ ಮನೋಭಾವಕ್ಕೆ ನಮ್ಮ ಪಕ್ಷಗಳು ವಂದನೆ ಸಲ್ಲಿಸುತ್ತವೆ. ಎಲ್‌ಸಾಲ್ವಡೋರ್‌ನ ಮೋನ್‌ಸಿನೋರ್ ಓಸ್ಕರ್ ಆರ್ನುಲ್ಫೋ ರೋಮೆರೋರ ಬಲಿದಾನ ಈ ಮನೋಭಾವದ ಅತ್ಯುನ್ನತ ಅಭಿವ್ಯಕ್ತಿಯಾಗಿದೆ. ಕ್ರಿಶ್ಚಿಯನ್ ಚಳವಳಿಗಳು ಹಾಗೂ ಧರ್ಮದಲ್ಲಿ ನಂಬಿಕೆಯುಳ್ಳ ಇತರ ಜನರೊಂದಿಗೆ ಸೇರಿಕೊಂಡು ಪ್ರಜಾಪ್ರಭುತ್ವ, ಮಾನವ ಹಕ್ಕುಗಳಿಗೆ ಗೌರವ ಹಾಗೂ ಸಾಮಾಜಿಕ ವಿಮೋಚನೆಗಾಗಿ ಹೋರಾಟವನ್ನು ಮುಂದುವರಿಸುತ್ತೇವೆ ಎಂಬ ನಮ್ಮ ನಿರ್ಧಾರವನ್ನು ಪುನರುಚ್ಚರಿಸುತ್ತೇವೆ. ಸೈನ್ಯದಲ್ಲಿರುವ ದೇಶಪ್ರೇಮದ ಭಾವನೆ ಹೊಂದಿರುವ ಎಲ್ಲಾ ಸೈನಿಕರಿಗೆ ಹಾಗೂ ಸೈನಿಕ ಸಮವಸ್ತ್ರದಲ್ಲಿರುವ ಎಲ್ಲಾ ಪ್ರಾಮಾಣಿಕ ವ್ಯಕ್ತಿಗಳಿಗೆ ಸಾಮ್ರಾಜ್ಯಶಾಹಿಗಳು ಹಾಗೂ ಪ್ರತಿಕ್ರಿಯಾವಾದಿಗಳು ತಮ್ಮ ಜನರ ಕೊಲೆಗಾರರಾಗುವಂತೆ ವಹಿಸಿದ ಪಾತ್ರವನ್ನು ನಿರ್ವಹಿಸಲು ನಿರಾಕರಿಸಬೇಕೆಂದು ನಾವು ಕರೆಕೊಡುತ್ತೇವೆ.

ದಕ್ಷಿಣ ಅಮೇರಿಕಾ ಹಾಗೂ ಕೆರೀಬಿಯನ್ ಕ್ಷೇತ್ರದಲ್ಲಿ ಸಾಮಾನ್ಯ ಜನತೆ ವಿಮೋಚನೆಯ ದೃಷ್ಟಿಯಿಂದ ಈಗ ಅತೀ ಮುಖ್ಯವಾದ ಸಮಯ. ಈ ಕ್ಷೇತ್ರಗಳ ಎಲ್ಲಾ ಜನಪ್ರಿಯ, ಕ್ರಾಂತಿಕಾರೀ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ತಮ್ಮ ಭೇದಗಳನ್ನು ಮರೆತು ಕ್ರಾಂತಿಯತ್ತ ಸಾಗುತ್ತಿರುವ ಎಲ್‌ಸಾಲ್ವಡೋರ್ ಹಾಗೂ ಗ್ವಾಟೆಮಾಲಾಕ್ಕೆ ಹಾಗೂ ಸಾಂಡಿನಿಸ್ತಾ ಕ್ರಾಂತಿಯನ್ನು ರಕ್ಷಿಸಲು ನಿಕಾರಗುವಾಕ್ಕೆ ದೃಢವಾದ ಬೆಂಬಲಕೊಡಬೇಕೆಂದು ನಾವು ಕರೆಕೊಡುತ್ತೇವೆ.

ಯಾಂಕೀ ಸಾಮ್ರಾಜ್ಯಶಾಹಿ ದಕ್ಷಿಣ ಅಮೇರಿಕಾದಲ್ಲಿ ಸೈನಿಕ ಆಕ್ರಮಣ ನಡೆಸದಂತೆ, ಶೀತಲ ಯುದ್ಧದ ಕಡೆಗೆ ಅಮೇರಿಕಾ ಸಂಯುಕ್ತ ಸಂಸ್ಥಾನ ತನ್ನ ಧೋರಣೆಯನ್ನು ಬದಲಿಸಿ ಮತ್ತೆ ಮಿಲಿಟರಿ ನೆಲೆಗಳನ್ನು ಹಾಗೂ ಅಣು ಶಸ್ತ್ರಾಸ್ತ್ರಗಳನ್ನು ಸ್ಥಾಪಿಸಿ, ಜಾಗತಿಕ ಶಾಂತಿಯನ್ನು ಕೆಡಿಸಿ ಜನರ ಯಶಸ್ಸನ್ನು, ಆಶೋತ್ತರಗಳನ್ನು ರಕ್ತಪಾತದಲ್ಲಿ ಮುಳುಗಿಸದಂತೆ ನೋಡಿಕೊಳ್ಳಬೇಕೆಂದು ಎಲ್ಲಾ ಜನರನ್ನು ಹಾಗೂ ಪ್ರಗತಿಶೀಲ ಶಕ್ತಿಗಳನ್ನು, ಲ್ಯಾಟಿನ್ ಅಮೇರಿಕಾದ ಮತ್ತು ಜಗತ್ತಿನ ಇತರ ದೇಶಗಳ ಪ್ರಜಾಪ್ರಭುತ್ವವಾದೀ ಕ್ರಾಂತಿಕಾರೀ ಸರ್ಕಾರಗಳನ್ನು ನಾವು ಕಳಕಳಿಯಿಂದ ಕೇಳಿಕೊಳ್ಳುತ್ತೇವೆ.

●

ಬ್ರಿಟನ್ನಿನಲ್ಲಿ ನಿರುದ್ಯೋಗದ ವಿರುದ್ಧ ಬೃಹತ್ ಮತಪ್ರದರ್ಶನ

ಬ್ರಿಟನ್ನಿನ ಲೇಬರ್ ಪಕ್ಷಕ್ಕೆ ಮೈಕೆಲ್ ಫೂಟ್ ನಾಯಕರಾಗಿ ಚುನಾಯಿತರಾದ ಮೇಲೆ ಆ ಪಕ್ಷದ ಧೋರಣೆ ಎಡಪಂಥದ ಕಡೆಗೆ ವಾಲಿದೆ. ಇದರಿಂದಾಗಿ ದುಡಿಯುವ ಜನರನ್ನು ಬಹಳ ಸಂಕಷ್ಟಕ್ಕೆ ಸಿಲುಕಿಸಿರುವ ಶ್ರೀಮತಿ ಮಾರ್ಗರೆಟ್ ಥ್ಯಾಚರ್ ಸರಕಾರದ ಮೊನಿಟರಿಸ್ಟ್ (ನಾಣ್ಯ ಪೂರೈಕೆಯಲ್ಲಾಗುವ ಬದಲಾವಣೆಯಿಂದಲೇ ದೇಶದ ಆರ್ಥಿಕತೆಯ ದಿಕ್ಕು ನಿರ್ಧರಿತವಾಗುತ್ತದೆ ಎಂದು ಹೇಳುವ ಸಿದ್ಧಾಂತ) ಧೋರಣೆಗಳ ವಿರುದ್ಧ ನಡೆಯುತ್ತಿರುವ ಹೋರಾಟವನ್ನು ಉತ್ಸಾಹಪೂರ್ವಕ ಸೇರಿಕೊಂಡಿದೆ.

ಬ್ರಿಟನ್ನು ಈಗ ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ಬೂರ್ಜ್ವಾ ಆರ್ಥಿಕ ತಜ್ಞರೇ ಇದನ್ನು 1930ರ ದಶಕದ ತೀವ್ರ ಆರ್ಥಿಕ ದುರ್ದೆಸೆಯೊಂದಿಗೆ ಹೋಲಿಸಬಹುದು ಎನ್ನುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಲಿವರ್‌ಪೂಲ್‌ನಲ್ಲಿ ಒಂದು ಲಕ್ಷ ಮಂದಿ ನವೆಂಬರ್ 29ರಂದು ಮತಪ್ರದರ್ಶನ ನಡೆಸಿದರು. ಲಂಡನ್‌ನ ಹೊರಗೆ 1930ರ ದಶಕದ ನಂತರ ನಿರುದ್ಯೋಗದ ವಿರುದ್ಧ ಇಷ್ಟು ದೊಡ್ಡ ಮತಪ್ರದರ್ಶನ ನಡೆದಿಲ್ಲವಂತೆ. ಪ್ರದರ್ಶನಕಾರರು ನಗರದ ಜನಜೀವನವನ್ನು ಸ್ತಬ್ಧಗೊಳಿಸಿದರು. ಬ್ರಿಟನ್ನಿನ ಬೇರೆ ಬೇರೆ ಭಾಗಗಳಿಂದ ಲಿವರ್‌ಪೂಲ್‌ಗೆ ಬಂದಿದ್ದ ಪ್ರದರ್ಶನಕಾರರ ನಾಯಕತ್ವವನ್ನು ಮೈಕೆಲ್ ಫೂಟ್ ಹಾಗೂ ಇತರ ಲೇಬರ್ ಪಕ್ಷದ ನಾಯಕರು ವಹಿಸಿದ್ದರು.

ಲಂಡನ್ನಿನ "ದಿ ಇಕನಾಮಿಸ್ಟ್" ಪತ್ರಿಕೆಯ ಪ್ರಕಾರ "ಈ ತಿಂಗಳ ನಿರುದ್ಯೋಗಿಗಳ ಅಧಿಕೃತ ಸಂಖ್ಯೆ 20,3 ಲಕ್ಷಕ್ಕೇರಿದೆ." ಒಬ್ಬ ಬ್ರಿಟಿಷ್ ಕಾರ್ಮಿಕ ನಾಯಕರು ನಿರುದ್ಯೋಗಿಗಳ ಸಂಖ್ಯೆಯನ್ನು "ದೂಲು ಸಂಕಷ್ಟದ ಥರ್ಮಾಮೀಟರ್" ಎಂದಿದ್ದಾರೆ.

ಈಗ ಡೌನಿಂಗ್ ರಸ್ತೆ (ಬ್ರಿಟನ್ನಿನ ಪ್ರಧಾನಮಂತ್ರಿಯ ಅಧಿಕೃತ ನಿವಾಸ)ಯಲ್ಲಿ ಅಧಿಕಾರ ಹೊಂದಿರುವ "ನಿರುದ್ಯೋಗದ ಪಕ್ಷ"ವನ್ನು ಮತಪೆಟ್ಟಿಗೆಯ ಮೂಲಕ ಧ್ವಂಸಗೊಳಿಸಲು ತಯಾರಾಗಬೇಕೆಂದು ಪ್ರದರ್ಶನಕಾರರನ್ನುದ್ದೇಶಿಸಿ ಮೈಕೆಲ್ ಫೂಟ್ ಹೇಳಿದರು.

ಲೇಬರ್ ಪಕ್ಷದ ಇನ್ನೊಬ್ಬ ಎಡಪಂಥೀಯ ನಾಯಕ ಟಾನಿಬೆನ್ ಅಂತರಿಕವಾಗಿ ಮೇಲೆ ಹೇಳಿದ ಮಾನಿಟರಿಸಂ ನೀತಿ ಹಾಗೂ ಸೈನಿಕವಾದದ ವಿದೇಶ ನೀತಿ ಇವೆರಡಕ್ಕಾಗಿ ಉದ್ದೇಶಪೂರ್ವಕವಾಗಿ ಬ್ರಿಟನ್ನಿನ ಜನರ ಬಲಿದಾನ ಕೊಡಲಾಗುತ್ತಿದೆ ಎಂದರು.

ಶ್ರೀಮತಿ ಥ್ಯಾಚರರ ಧೋರಣೆಗಳ ಬಗ್ಗೆ ಸ್ವತಃ ಟೋರೀ ಪಕ್ಷದಲ್ಲೇ ಭಿನ್ನಾಭಿಪ್ರಾಯ ಮೂಡಿರುವ ಸಮಯದಲ್ಲೇ ಲೇಬರ್ ಪಕ್ಷ ಆಕೆಯ ಸರಕಾರದ ವಿರುದ್ಧ ಸಮರ ಆರಂಭಿಸಿದೆ. ಶ್ರೀಮತಿ ಥ್ಯಾಚರ್‌ರವರ ಧೋರಣೆಗಳ ಟೀಕಾಕಾರರಾದ ಮಾಜೀಪ್ರಧಾನ ಮಂತ್ರಿ ಎಡ್ವರ್ಡ್ ಹೀಡ್ ಲೇಬರ್ ಪಕ್ಷದ ಈ ಮತಪ್ರದರ್ಶನದ 1 ದಿನ ಮೊದಲು ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತಾ ಆರ್ಥಿಕ ನೀತಿ ಪರಿಸ್ಥಿತಿಗೆ ಸರಿಯಾಗಿ ಸ್ಪಂದಿಸುವಂತಹದಿರಬೇಕೆಂದು ಕರೆಕೊಟ್ಟರು. ತನ್ನ ಈ ಅಭಿಪ್ರಾಯಕ್ಕೆ ಟೋರೀ ಪಕ್ಷದ ಬೆಂಬಲವಿದೆಯೆಂದೂ ಅವರು ಹೇಳಿದ್ದಾರೆ. ಆರ್ಥಿಕ ಹಿಂಜರಿಕೆ

(6ನೇ ಪುಟ ನೋಡಿ)

ಚಿನ್ನದ ಗಣಿ ಕಾರ್ಮಿಕರ ಪ್ರಚಂಡ ವಿಜಯ

ಕೋಲಾರ ಚಿನ್ನದ ಗಣಿಗಳಿಗೆ ನೂರು ವರ್ಷ ತುಂಬುವದರಲ್ಲಿದೆ. ಈ ಶತಾಬ್ದಿ ಸಂದರ್ಭದಲ್ಲಿ ಒಂದು ತಿಂಗಳ ಸಂಬಳವನ್ನು ಮತ್ತು ಬೋನಸ್ಸನ್ನು ಹೆಚ್ಚಿಗೆ ಕೊಡಬೇಕೆಂದು ಕಾರ್ಮಿಕರು ಆಡಳಿತವರ್ಗದ ಮುಂದೆ ಬೇಡಿಕೆಯನ್ನಿಟ್ಟಿದ್ದರು. ಆಡಳಿತ ವರ್ಗ ಬೇಡಿಕೆಗೆ ಒಪ್ಪದ್ದರಿಂದ ನವೆಂಬರ್ 26ರಂದು ಒಂದು ದಿನದ ಸಾಂಕೇತಿಕ ಮುಷ್ಕರವನ್ನಾಚರಿಸಿದ್ದರು.

ನವೆಂಬರ್ 27ರಂದು ನಡೆದ ಹಠಾತ್ ಮುಷ್ಕರದ ಪರಿಣಾಮವಾಗಿ, ಮುಂಗಡ ಪಡೆದ 200ರೂಗಳನ್ನು ಕಡಿತ ಮಾಡಿಕೊಂಡು 8 33% ಬೋನಸ್ಸು ಕೊಡಲು ಆಡಳಿತ ವರ್ಗ ಮುಂದೆ ಬಂದಿತು, ಸಮಂಜಸವಲ್ಲದ ಆಡಳಿತ ವರ್ಗದ ಈ ನಿಲುವನ್ನು ಕೆ.ಜಿ ಎಫ್. ಕಾರ್ಮಿಕ ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ಖಂಡಿಸಿ, ಅನಿರ್ದಿಷ್ಟ ಅವಧಿಯ ಮುಷ್ಕರದ ಎಚ್ಚರಿಕೆಯನ್ನು ನೀಡಿದ್ದರು. ಈ ಒಳಗಾಗಿ ದೆಹಲಿಯಲ್ಲಿ ನಡೆದ ಮಾತುಕತೆಗಳೂ ಫಲಪ್ರದವಾಗಿಲ್ಲ.

ಕಾರ್ಮಿಕರ ಮುಷ್ಕರದ ಬೆದರಿಕೆಗೆ ಮಣಿದ ಆಡಳಿತ ವರ್ಗವು ಸಂಧಾನಕ್ಕೆ ಮುಂದೆಬಂದು ಕೆಲವು ಸುತ್ತಿನ ಮಾತುಕತೆಯ ನಂತರ ಕೊನೆಗೂ ಒಪ್ಪಂದಕ್ಕೆ ಬಂದಿತು. ಬೋನಸ್ಸನ್ನೂ ಸೇರಿ ಪ್ರತಿಯೊಬ್ಬ ಕಾರ್ಮಿಕನಿಗೂ ತಲಾ 500ರೂ. ಕೊಡಲು ಒಪ್ಪಿಕೊಂಡಿದ್ದು ಈ ಹಣವನ್ನು 18-12-80ರಂದು ವಿತರಣೆ ಮಾಡಲಾಗಿದೆ. 16-12-80 ರಂದು ನಡೆದ ಈ ಒಪ್ಪಂದಕ್ಕೆ ಕೋಲಾರ್ ಗೋಲ್ಡ್ ಮೈನ್ಸ್ ವರ್ಕರ್ಸ್ ಯೂನಿಯನ್ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾವ್ ಮತ್ತು ಕೆ.ಜಿ ಎಫ್.ನ ಚೇರ್‌ಮನ್ ಶ್ರೀ ಪಿ. ಗುಪ್ತಾ ಅಂಕಿತಹಾಕಿದ್ದಾರೆ.

ಅದೇ ದಿನ ಸಾಯಂಕಾಲ ಕೆ ಜಿ. ಎಫ್ ನಲ್ಲಿ ನಡೆದ ಬೃಹತ್ ಬಹಿರಂಗ ಸಭೆಯಲ್ಲಿ ಸಹಸ್ರ ಸಹಸ್ರ ಕಾರ್ಮಿಕರು ಪಾಲ್ಗೊಂಡಿದ್ದು, ಕಾಂ. ಸೂರ್ಯನಾರಾಯಣರಾವ್ ಒಪ್ಪಂದದ ಅಂಶಗಳು ಘೋಷಿಸಿದಾಗ ಕಾರ್ಮಿಕರು ಹರ್ಷೋದ್ಗಾರದಿಂದ ಸ್ವಾಗತಿಸಿದರು ಕಾಂ. ಸೂರ್ಯನಾರಾಯಣರಾವ್ ಮಾತನಾಡುತ್ತಾ, ಪ್ರಸಕ್ತ ಒಪ್ಪಂದಕ್ಕೆ, ಕಾರ್ಮಿಕರ ಹೋರಾಟದ ಮನೋಭಾವ, ಐಕ್ಯತೆಗಳು ಮುಖ್ಯ ಕಾರಣ ಎಂದು ತಿಳಿಸುತ್ತಾ ಐಕ್ಯತೆಯನ್ನು ಮುಂದುವರೆಸಿಕೊಂಡು ಹೋಗಲು ಕರೆ ಇತ್ತರು.

ಕಾಂ. ಸವರೀದಾಸ್ ಮತ್ತಿತರರು ಮಾತನಾಡುತ್ತಾ, ಪ್ರಚಂಡ ಐಕ್ಯತೆಯನ್ನು ಪ್ರದರ್ಶಿಸಿದ್ದಕ್ಕಾಗಿ ಕಾರ್ಮಿಕರನ್ನು ಅಭಿನಂದಿಸಿದರು.

ಸಿ ಐ ಟಿ.ಯು. ವಿನಂಥ ಸಮರಶೀಲ ನಾಯಕತ್ವವನ್ನು ಪಡೆದ ಸಾರ್ಥಕತೆ ಕಾರ್ಮಿಕರಲ್ಲಿ ಎದ್ದು ಕಾಣುತ್ತಿತ್ತು.

ಈ ಬಹಿರಂಗ ಸಭೆಗೂ ಮೊದಲು ಕೆ ಜಿ.ಎಫ್ ನಲ್ಲಿ ನಡೆದ ಟೂರ್ನಿ ಫೈನಲ್‌ನ ವಿಜೇತರಿಗೆ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕಾಂ. ಸೂರ್ಯನಾರಾಯಣರಾವ್ ಬಹುಮಾನ ವಿತರಣೆ ಮಾಡಿದರು.

ಬಾಣ-ಬಿರುಸು, ಪಟಾಕಿಗಳನ್ನು ಸುಡುತ್ತ ಸಂಭ್ರಮದಲ್ಲಿದ್ದ ಕಾರ್ಮಿಕರು ಕೆ ಜಿ.ಎಫ್.ನಲ್ಲಿ ಹಬ್ಬದ ವಾತಾವರಣ ಉಂಟು ಮಾಡಿದ್ದರು.

o

ಬ್ರಿಟನ್ನಿನಲ್ಲಿ ನಿರುದ್ಯೋಗದ ವಿರುದ್ಧ ಬೃಹತ್ ಮತಪ್ರದರ್ಶನ

(5ನೇ ಪುಟದಿಂದ)

ಇನ್ನಷ್ಟು ತೀವ್ರವಾಗುವುದೇ ಹೊರತು ಕಡಿಮೆಯಾಗುವುದಿಲ್ಲ ಎಂದೂ ಅವರು ಹೇಳಿದರು.

ಈ ಹಿಂದೆ "ಶ್ರೀಮತಿ ಥ್ಯಾಚರರ ಸರಕಾರಕ್ಕೆ ಬ್ರಿಟನ್ನಿನ ಆರ್ಥಿಕತೆಯಲ್ಲಿ ಇಳಿಪ್ರಸರಣದ ಅಯಃಶಸ್ವೀ ಆದರೆ ತೀವ್ರತರವಾದ ಧೋರಣೆಯನ್ನು ಪ್ರಯೋಗಿಸಲು ಸಾಕಷ್ಟು ಅವಕಾಶ ಕೊಡಬೇಕು" ಎಂದು ನಂಬಿದ್ದ 'ದಿ ಇಕನಾಮಿಸ್ಟ್' ಪತ್ರಿಕೆ ಕೂಡಾ ಈಗ "ಥ್ಯಾಚರ್ ಸರಕಾರಕ್ಕೆ ವೇಗವಾಗಿ ಈಜಲು ಸಾಧ್ಯವಿಲ್ಲವಾದರೆ ಬ್ರಿಟನ್ನಿನ ಒಟ್ಟು ರಾಷ್ಟ್ರೀಯ ಉತ್ಪನ್ನ ಶ್ರೀಮತಿ ಥ್ಯಾಚರ್ ಅಧಿಕಾರ ವಹಿಸಿಕೊಂಡಾಗ ಇದ್ದುದಕ್ಕಿಂತ ಕಡಿಮೆಯಾಗಿ, ಮತ್ತು ಈ ನಡುವೆ ನಿರುದ್ಯೋಗ ದ್ವಿಗುಣವಾಗಿ 1983-84 ರಲ್ಲಿ ಮರುಚುನಾವಣೆ ಬೇಕೆಂಬ ವಾದವನ್ನು ಎದುರಿಸಬೇಕಾಗಬಹುದು" ಎಂದು ಹೇಳುತ್ತಿದೆ. ಆದರೆ ಈ ಪತ್ರಿಕೆ ದೇಶದ ಸಮಸ್ಯೆಗೆ ಸೂಚಿಸುವ ಔಷಧಿಯೆಂದರೆ ರಾಷ್ಟ್ರೀಕೃತ ಉದ್ಯಮಗಳನ್ನು ಮತ್ತೆ ಖಾಸಗಿಯವರಿಗೆ ಕೊಡುವುದು, ಸರಕಾರೀ ವೆಚ್ಚದಲ್ಲಿ ಕಡಿತ ಮಾಡುವುದು ಇತ್ಯಾದಿ. ಸರಕಾರೀ ವೆಚ್ಚದಲ್ಲಿ ಕಡಿತವೆಂದರೆ ಅದರ ಮೊದಲ ದುಷ್ಪರಿಣಾಮವಾಗುವುದು ಸಾಮಾಜಿಕ ಸೌಲಭ್ಯಗಳ ಮೇಲೆ, ಜನಸಾಮಾನ್ಯರಿಗೆ ಉಪಯೋಗವಾಗುವ ಸಾಮಾಜಿಕ ಸೌಲಭ್ಯಗಳು ಈಗಾಗಲೇ ಶ್ರೀಮತಿ ಥ್ಯಾಚರ್ ಸರಕಾರ ದಾಳಿ ಆರಂಭಿಸಿಯಾಗಿದೆ.

●

ಕುದುರೆಮುಖ ಕಾರ್ಮಿಕರ ವಜಾ ಅನ್ಯಾಯ

ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖದ ಹೆಚ್.ಎಸ್.ಸಿ ಎಲ್. ಕಬ್ಬಿಣದ ಅದುರು ಯೋಜನೆಯ ಆಡಳಿತ ಕಚೇರಿಯು 239 ಮಂದಿ ಕಾರ್ಮಿಕರಿಗೆ ವಜಾ ನೋಟೀಸನ್ನು ಕೊಟ್ಟಿದೆ. ಇವರಲ್ಲಿ ಅನೇಕರು ಬಹಳ ವರ್ಷಗಳಿಂದ ಕಂಪೆನಿಗೆ ಸೇವೆ ಸಲ್ಲಿಸಿದ್ದಾರೆ. ಈ ಕಾರ್ಮಿಕರೆಲ್ಲರೂ ಕಚೇರಿಯ ಮುಂದೆ ಸತ್ಯಾಗ್ರಹ ನಡೆಸುತ್ತಿದ್ದಾರೆ. ಹೆಚ್.ಎಸ್.ಸಿ ಎಲ್. ಕಾರ್ಮಿಕರ ಸಂಘವು ಈ ಕಾರ್ಮಿಕರನ್ನು ನೆರೆಯ ಸೂಪ ಯೋಜನೆಯಲ್ಲಿ ಅಥವಾ ಕಂಪೆನಿಯ ಇತರ ಯೋಜನೆಗಳಲ್ಲಿ ಸೇರಿಸಿಕೊಳ್ಳುವಂತೆ ಸಲಹೆ ಮಾಡಿದೆ. ಆದರೆ ಕಂಪೆನಿ ಇದಕ್ಕೆ ಕಿವಿಗೊಡುತ್ತಿಲ್ಲ. ಹೆಚ್.ಎಸ್.ಸಿ. ಎಲ್.ನಲ್ಲಿ 22,000 ಕಾರ್ಮಿಕರನ್ನು ನೇಮಿಸಿಕೊಳ್ಳಲಾಗಿದೆ. ಆದರೆ ಕಂಟ್ರಾಕ್ಟುದಾರರ ಮೂಲಕ ಸುಮಾರು 50,000 ಕಾರ್ಮಿಕರನ್ನು ಅನೇಕ ಕೆಲಸಗಳಿಗೆ ನೇಮಿಸಿಕೊಳ್ಳಲಾಗಿದೆ, ಕಂಪೆನಿಯ ಕಾರ್ಮಿಕರನ್ನು ಹೆಚ್ಚುವರಿ ಎಂದು ಬೀದಿಪಾಲು ಮಾಡಿ, ಕಂಟ್ರಾಕ್ಟುದಾರರ ಮೂಲಕ ಕೆಲಸಗಾರರನ್ನು ನೇಮಿಸಿಕೊಳ್ಳಲಾಗುತ್ತಿದೆ. ಕಂಪೆನಿಗೆ ನಷ್ಟ ಆಗುತ್ತಿದ್ದರೂ ಕೆಲವು ಅಧಿಕಾರಿಗಳು ಕಂಟ್ರಾಕ್ಟುದಾರರ ಜೊತೆ ಪಿತೂರಿ ಮಾಡಿ ಅಪಾರ ಹಣ ಗಳಿಸುತ್ತಿದ್ದಾರೆ.

ಕಾರ್ಮಿಕರ ವಜಾ ನೋಟೀಸನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಲು ಐವರು ಕಾಮ್ರೇಡ್‌ಗಳು ಕಲ್ಕತ್ತಕ್ಕೆ ತೆರಳಿ ಅಲ್ಲಿನ ಮುಖ್ಯ ಕಚೇರಿಯ ಮುಂದೆ ಸತ್ಯಾಗ್ರಹ ನಡೆಸುತ್ತಿದ್ದಾರೆ.

o

ರೈತ ನಾಯಕರ ಭೀಕರ ಕೊಲೆ

ಉತ್ತರ ಪ್ರದೇಶ ಸರ್ಕಾರ ಸಕ್ಕರೆ ಕಾರ್ಖಾನೆ ಮಾಲೀಕರ ಪರವಾದ ಧೋರಣೆಗೆ ಪ್ರಸಿದ್ಧಿಯಾಗಿದೆ. ತನ್ನ ರೈತ ವಿರೋಧಿ ನಿಲುವಿಗೆ ಕುಖ್ಯಾತವಾಗಿರುವ ನಾದೇಹಿ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತ ವರ್ಗವು ಸರ್ಕಾರದ ಅಭಯ ರಕ್ಷೆಯೊಂದಿಗೆ ಇಬ್ಬರು ರೈತ ಮುಖಂಡರ ಅಮಾನುಷ ಕೊಲೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಒಂದು ಕ್ವಿಂಟಾಲ್ ಕಬ್ಬಿಗೆ 30ರೂಗಳನ್ನು ನಿಗದಿ ಪಡಿಸಬೇಕೆಂಬ ರೈತರ ನ್ಯಾಯಯುತ ಬೇಡಿಕೆಯನ್ನು ಈಡೇರಿಸುವವರೆಗೆ ನಾದೆಹಿ ಕಾರ್ಖಾನೆಗೆ ಕಬ್ಬನ್ನು ಸರಬರಾಜು ಮಾಡದಂತೆ ರೈತರಿಗೆ ಕಬ್ಬು ಬೆಳೆಗಾರರ 'ಕೇನ್ ಯೂನಿಯನ್' ಕರೆ ನೀಡಿತು. ಈ ಸಂಘದ ಕರೆಗೆ ಸಿ ಪಿ.ಐ.(ಎಂ) ಮತ್ತು ಸಿ.ಪಿ ಐ. ನೇತೃತ್ವದ 'ಕಿಸಾನ್ ಸಭೆ' ಗಳು ಸಂಪೂರ್ಣ ಬೆಂಬಲ ನೀಡಿದವು. ಇದನ್ನು ಕಂಡ ಆಡಳಿತ ವರ್ಗವು ನವೆಂಬರ್ 24ರಂದು ತನ್ನ ಪರವಾದ 'ಕಿಸಾನ್ ಯೂನಿಯನ್' ಎಂಬ ಬೋಗಸ್ ಸಂಘವೊಂದನ್ನು ಅಸ್ತಿತ್ವಕ್ಕೆ ತಂದಿತು. ಈ ಸಮಾಜಘಾತುಕರ ಮುಖಂಡನಾದ ಸರ್ದಾರ್ ಗುರುಚರಣ್ ಸಿಂಗ್ ಮುಷ್ಕರ ನಿರತ ರೈತರಿಗೆ ಬೆದರಿಕೆ ಹಾಕಿದನು.

ನವೆಂಬರ್ 25ರಂದು ಮಧ್ಯಾಹ್ನ ಐದು ಮಂದಿ ಸಿ. ಪಿ. ಐ ಗೆ ಸೇರಿದ ಕಿಸಾನ್ ಮುಖಂಡರು ಜನ್‌ಪುರದಿಂದ ನಾದೇಹಿಯ ಕಡೆ ಬರುತ್ತಿದ್ದರು. ಇದೇ ಸಮಯಕ್ಕೆ ಸರಿಯಾಗಿ ಕಬ್ಬು ತುಂಬಿದ ಟ್ರಾಕ್ಟರ್‌ವೊಂದು ಕಾರ್ಖಾನೆಯ ಕಡೆ ವೇಗವಾಗಿ ಬಂದಿತು. ಟ್ರಾಕ್ಟರ್‌ನಲ್ಲಿದ್ದ ಗುರುಚರಣ್ ಸಿಂಗ್ ಟ್ರಾಕ್ಟರನ್ನು ರಸ್ತೆಯ ಬಲಬದಿಗೆ ತಿರುಗಿಸಿ ಹಾದುಹೋಗುತ್ತಿದ್ದ 'ಕಿಸಾನ್ ಸಭೆ'ಯ ಮುಖಂಡರ ಮೇಲೆ ಓಡಿಸಿದರು. ಸಿ.ಪಿ ಐ ಮುಖಂಡ ಕಾಂ ಕರಣ್‌ಸಿಂಗ್ ಚಕ್ರದಡಿ ಸಿಕ್ಕಿ ಸ್ಥಳದಲ್ಲೇ ಮೃತರಾದರು, ಕಾಂ. ಸ್ವರೂಪ್ ಸಿಂಗ್ ಎಂಬ ಇನ್ನೊಬ್ಬರು ತೀವ್ರಗಾಯಗಳಿಂದಾಗಿ ಆಸ್ಪತ್ರೆಯಲ್ಲಿ ನಿಧನರಾದರು. ನೈನಿತಾಲ್ ಜಿಲ್ಲೆಯ ಅಧಿಕಾರಿಗಳು ಈ ಕಗ್ಗೊಲೆಯನ್ನು ರೈತರ ಎರಡು ಗುಂಪಿನ ನಡುವಿನ ಘರ್ಷಣೆಯ ಪರಿಣಾಮ ಎಂದು ವರ್ಣಿಸಿರುವುದನ್ನು ಸಿ ಪಿ.ಐ (ಎಂ) ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಶಂಕರ್‌ದಯಾಲ್ ತಿವಾರಿ ಮತ್ತು ಸಿ.ಪಿ.ಐ ನ ರಾಜ್ಯ ಕಾರ್ಯದರ್ಶಿ ಕಾಂ ಸರೋಜ್‌ಪಾಂಡೆ ತೀವ್ರವಾಗಿ ಖಂಡಿಸಿದ್ದಾರೆ.

ತಡವಾಗಿಯಾದರೂ ಜಿಲ್ಲೆಯಾದ್ಯಂತ ಕಗ್ಗೊಲೆಯ ಸುದ್ದಿ ಬಿರುಗಾಳಿಯಂತೆ ಹಬ್ಬಿತು. ಕಿಸಾನ್ ಸಭೆ ಬೆಂಬಲಿಗರು ಜನ್‌ಪುರಕ್ಕೆ ಧಾವಿಸಿದರು. ಎಲ್ಲ ಅಂಗಡಿಗಳೂ ಮುಚ್ಚಲ್ಪಟ್ಟವು. ವಿದ್ಯಾರ್ಥಿಗಳು ಶಾಲಾ-ಕಾಲೇಜುಗಳಿಂದ ಹೊರಬಂದು ಪ್ರತಿಭಟನಾ ಮೆರವಣಿಗೆ ನಡೆಸಿದರು. ಕಾಂಗ್ರೆಸ್(ಐ) ಹೊರತು ಮಿಕ್ಕೆಲ್ಲ ರಾಜಕೀಯ ಪಕ್ಷಗಳ ಮುಖಂಡರು ಸ್ಥಳಕ್ಕೆ ಧಾವಿಸಿದರು. ಸಾವಿರಾರು ರೈತರು ಅಗಲಿದ ನಾಯಕರಿಗೆ ಶ್ರದ್ಧಾಂಜಲಿ ಸಲ್ಲಿಸಿದರು ನಾದೇಹಿ ಕಾರ್ಖಾನೆ ಈಗ ಸಂಪೂರ್ಣ ಮುಚ್ಚಲ್ಪಟ್ಟಿದೆ. ನೈನಿತಾಲ್ ಜಿಲ್ಲೆಯ ಇತರ ಎರಡು ಸಕ್ಕರೆ ಕಾರ್ಖಾನೆಗಳಿಗೂ ರೈತರು ಕಬ್ಬಿನ ಸರಬರಾಜು ನಿಲ್ಲಿಸಿರುವುದರಿಂದ ಅಲ್ಲಿಯೂ ಕಾಲುಭಾಗದಷ್ಟು ಮಾತ್ರ ಉತ್ಪಾದನೆ ಮುಂದುವರೆದಿದೆ, ಕಿಸಾನ್ ಸಭೆಗಳ ಮುಖಂಡರು ಮುಂದಿನ ಕಾರ್ಯಕ್ರಮವನ್ನು ರೂಪಿಸುತ್ತಿದ್ದಾರೆ. ●

ಎಸ್.ಎಫ್.ಐ. ಘಟಕದ ಉದ್ಘಾಟನೆ

ಸವದತ್ತಿಯಲ್ಲಿ 8-12-80ರಂದು ಸ್ಥಳೀಯ ಜ್ಯೂನಿಯರ್ ಕಾಲೇಜಿನಲ್ಲಿ ಸೇರಿದ ವಿದ್ಯಾರ್ಥಿ ಸಭೆಯಲ್ಲಿ ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾದ ಘಟಕವು ಉದ್ಘಾಟಿಸಲ್ಪಟ್ಟಿತು.

ಘಟಕದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಘಟಕದ ಮಾಜಿ ಅಧ್ಯಕ್ಷರು ಹಾಗೂ ಮಲಪ್ರಭಾ ರೈತ ಹೋರಾಟದ ಮುಖಂಡರೂ ಆದ ಶ್ರೀ ವಿ.ಎನ್. ಹಳಕಟ್ಟಿ ಅವರು ನೆರವೇರಿಸಿದರು. ಧಾರವಾಡ ಜಿಲ್ಲಾ ಘಟಕದ ಸಂಚಾಲಕರಾದ ಶ್ರೀ ರುದ್ರಪ್ಪಕಾಯಿ ಅವರು ವಿದ್ಯಾರ್ಥಿಗಳ ಸಂಘಟಿತ ಹೋರಾಟದ ಅವಶ್ಯಕತೆಯನ್ನು ವಿವರಿಸಿದರು, ಮುಖ್ಯ ಅತಿಥಿಗಳಾಗಿ ಕರ್ನಾಟಕ ಮಾಧ್ಯಮಿಕ ಶಾಲಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಕೆ ವಿ. ರಾಯಚೂರ ಅವರು ಆಗಮಿಸಿದ್ದರು. ಪ್ರಮುಖ ವೈದ್ಯರಾದ ಡಾ. ಎ. ಎನ್. ಹಣಮಂತಗಡ ಅವರು ಅಧ್ಯಕ್ಷತೆ ವಹಿಸಿದ್ದರು. ಸವದತ್ತಿ ಘಟಕದ ಅಧ್ಯಕ್ಷರಾಗಿ ವಿ.ಸಿ. ಕೊಡ್ಲಿಮಠ ಮತ್ತು ಕಾರ್ಯದರ್ಶಿಯಾಗಿ ವಿ.ವಿ. ನವಲೆ ಮತ್ತು 18 ಜನರ ಕಾರ್ಯಕಾರಿ ಸಮಿತಿ ಆಯ್ಕೆಯಾಗಿದೆ. ●

ಉಪವಾಸ ಸತ್ಯಾಗ್ರಹ

ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ವಸತಿಹೀನರಿಗೆ ನಿವೇಶನ ದೊರೆಯುವಂತೆ ಆಗ್ರಹಪಡಿಸಿ 24-11-80 ರಂದು ಧರಣಿ ಸತ್ಯಾಗ್ರಹ ನಡೆದಿತ್ತು, ತಾಲ್ಲೂಕು ದೊರೆಗಳು ಯಾವ ಕ್ರಮಕ್ಕೂ ಮುಂದಾಗದಿದ್ದ ಕಾರಣದಿಂದ 4-12-80ರಿಂದ ತಾಲ್ಲೂಕು ಕಚೇರಿ ಎದುರು ಉಪವಾಸ ಸತ್ಯಾಗ್ರಹ ಪ್ರಾರಂಭವಾಗಿದೆ. ವಿವಿಧ ಪಕ್ಷಗಳ, ಸಂಘಸಂಸ್ಥೆಗಳ ಪ್ರಮುಖರು ಈ ಸರದಿ ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಕುಣಿಗಲ್‌ನಿಂದ ಪ್ರತಿನಿತ್ಯ ಮುಖ್ಯಮಂತ್ರಿಗೆ ಟೆಲಿಗ್ರಾಂ ಹೋಗುತ್ತಿದ್ದರೂ, ಉಪವಾಸ ಸತ್ಯಾಗ್ರಹ ನಡೆದಿದ್ದರೂ ಇದುವರೆಗೆ ಯಾವ ಫಲ ದೊರೆತಿಲ್ಲ

ಈ ಹೋರಾಟದ ನೇತೃತ್ವವನ್ನು ಕಾಂ. ಮಹಮ್ಮದ್ ದಸ್ತಗೀರ್, ಕಾಂ. ಬಡೇಸಾಬ್ ಮತ್ತು ಕಾಂ. ಅಂಜಪ್ಪ ವಹಿಸಿದ್ದಾರೆ. ಉಪವಾಸ ಸತ್ಯಾಗ್ರಹ ತಾಲ್ಲೂಕು ಜನತೆಯ ಗಮನ ಸೆಳೆದಿದೆ.

●

ತೋಟಕಾರ್ಮಿಕರ ಇನ್ಸೆಂಟಿವ್ ಕೂಲಿ ಹೆಚ್ಚಳ

ತೋಟಮಾಲೀಕರ ಸಂಘವಾದ ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್, ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಐ.ಎನ್.ಟಿ.ಯು.ಸಿ.ಯು ಕಾರ್ಮಿಕಸಂಘಗಳೂ ಸೇರಿದಂತೆ ಪ್ಲಾಂಟೇಷನ್ ಕೈಗಾರಿಕೆಯಲ್ಲಿರುವ ಕಾರ್ಮಿಕಸಂಘಗಳ ನಡುವೆ ತಾ. 18-12-80ರಂದು ಚಿಕ್ಕಮಗಳೂರಿನಲ್ಲಿ ಆದ ಒಪ್ಪಂದದ ಪ್ರಕಾರ ಕಾಫಿಹಣ್ಣು ಕೊಯ್ಯುವ ಕೆಲಸಕ್ಕೆ ಸಿಕ್ಕುವ ಇನ್ಸೆಂಟಿವ್ ಕೂಲಿಯು ಅರೇಬಿಕಾ ಕಾಫಿಗೆ ಚಿಕ್ಕಮಗಳೂರು-ಹಾಸನ ಜಿಲ್ಲೆಗಳಲ್ಲಿ ಒಂದು ಕೆ.ಜಿ.ಗೆ 9ಪೈಸೆಯಿಂದ 12 ಪೈಸೆಗೂ ಕೊಡಗಿನಲ್ಲಿ 10 ಪೈಸೆಯಿಂದ 13 ಪೈಸೆಗೂ ಈ ಋತುವಿನಿಂದ ಹೆಚ್ಚುಗುತ್ತದೆ. ರೋಬಸ್ಟಾ ಕಾಫಿಹಣ್ಣು ಕೊಯ್ಯುವ ಕೆಲಸಕ್ಕೂ ಇನ್ಸೆಂಟಿವ್ ಕೂಲಿ ಇದೇ ಪ್ರಮಾಣದಲ್ಲಿ ಹೆಚ್ಚಾಗುತ್ತದೆ.

ಈ ಒಪ್ಪಂದದ ಪ್ರಕಾರ ಇನ್ಸೆಂಟಿವ್ ಕೂಲಿಯ ಲೆಕ್ಕಾಚಾರ ಆಯಾ ದಿವಸವೇ ನಡೆಯಬೇಕು, ಕಾಫಿಹಣ್ಣು ಕೊಯ್ಯುವ ಕೆಲಸವನ್ನು ಖಾಯಂ ಕೆಲಸಗಾರರಿಗೆ ಕೊಡುವ ಆಶ್ವಾಸನೆಯಿದೆ. ಈ ಒಪ್ಪಂದದ ಪ್ರಕಾರ ಬಾಕಿ ಉಳಿಯುವ ವೇತನವನ್ನು ಮಾಲೀಕರು 10-1-1981ರ ಒಳಗೆ ಪಾವತಿ ಮಾಡಬೇಕಾಗಿದೆ.

ಕಳೆದ ಜೂನ್‌ನಿಂದ ಆರು ಸುತ್ತು ಮಾತುಕತೆ ನಡೆದು ಆರನೆಯ ಸುತ್ತಿನ ಮಾತುಕತೆಯಲ್ಲಿ ಈ ಒಪ್ಪಂದವಾಯಿತು. ಈ ಮಾತುಕತೆಯಲ್ಲಿ ಕಾಂ. ಸಿ. ನಂಜುಂಡಪ್ಪ, ಕಾಂ. ಎ. ಸಿ. ಕೇಶವ, ಕಾಂ. ಕೆ. ಸುಕುಮಾರ್, ಕಾಂ. ಕೆ. ವೇಲಾಯುಧ, ಕಾಂ. ಅಪ್ಪು, ಕಾಂ. ಎ. ಸುಕುಮಾರ್, ಕಾಂ. ವೇಲಾಯುಧಮೇಸ್ತ್ರಿ, ಮತ್ತು ಕಾಂ. ಓ.ಕೆ.ಎ. ಲತೀಫ್ ಸಿ.ಐ.ಟಿ.ಯು. ಸಂಘಗಳನ್ನು ಪ್ರತಿನಿಧಿಸಿದ್ದರು.

ನಮ್ಮ ರಾಜ್ಯದ ಕಾಫಿತೋಟಗಳಲ್ಲಿರುವ 1,65,000 ಕಾರ್ಮಿಕರಲ್ಲಿ ಮುಕ್ಕಾಲು ಭಾಗದ ಕಾರ್ಮಿಕರಿಗೆ ಈ ಹೆಚ್ಚಳ ಸಿಕ್ಕಬೇಕಾಗಿದೆ.

ಗುಬ್ಬಿ ತಾಲ್ಲೂಕು ರೈತ ಸಮ್ಮೇಳನ

ದಿನಾಂಕ 3-1-81ರಂದು ತುಮಕೂರು ಜಿಲ್ಲಾ ಗುಬ್ಬಿ ತಾಲ್ಲೂಕಿನ ರೈತಸಮ್ಮೇಳನವನ್ನು ಹೊಸಕೆರೆ ಗ್ರಾಮದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಶನಿವಾರ ನಡೆಯಲಿರುವ ಸಮ್ಮೇಳನದ ಅಧ್ಯಕ್ಷತೆಯನ್ನು ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಚಿಕ್ಕವೀರಯ್ಯನವರು ವಹಿಸಲಿದ್ದಾರೆ. ಮತ್ತು ಕಾಂ. ಚನ್ನಪ್ಪ, ಕೆ. ಆರ್. ನಾಯಕ್ ಮತ್ತು ಶ್ರೀ ಶಿವಾನಂದ ಶರ್ಮ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಈ ಸಮ್ಮೇಳನದ ಅಂಗವಾಗಿ ಕಾಂ. ಹೆಚ್. ಸಿ. ಉಜ್ಜನಿಯಪ್ಪ ಅಧ್ಯಕ್ಷರಾಗಿರುವ ಸ್ವಾಗತಸಮಿತಿಯನ್ನು ರಚಿಸಲಾಗಿದೆ.

ಗ್ಯಾಂಗ್‌ಮನ್‌ಗಳ ವಿಶೇಷ ಸಭೆ

ಕೊಡಗು ಜಿಲ್ಲೆಯ ಜನರಲ್ ವರ್ಕರ್ಸ್ ಯೂನಿಯನ್‌ನ ಪಿ.ಡಬ್ಲ್ಯು.ಡಿ ವಿಭಾಗದ ಗ್ಯಾಂಗ್‌ಮನ್‌ಗಳ ವಿಶೇಷ ಸಭೆಯು 14-12-80ರಂದು ನಡೆಯಿತು. ರಸ್ತೆ ಗ್ಯಾಂಗ್‌ಮನ್‌ಗಳಿಗೆ ಸಕಾಲದಲ್ಲಿ ವೇತನ, ಅವರ ವೇತನ ಏರಿಕೆ, ಸೇವೆಯ ಖಾಯಂ, ಅವರಿಗೆ ಸಮವಸ್ತ್ರ, ರಜೆ ನೀಡಿಕೆ, ಇವುಗಳನ್ನು ಒತ್ತಾಯಿಸುವ ಗೊತ್ತುವಳಿಗಳನ್ನು ಸಭೆ ಸ್ವೀಕರಿಸಿತು. ಪ್ರಜಾಪ್ರಭುತ್ವ ಹಕ್ಕಿನ ದಮನಕಾರಿಯಾದ ರಾಷ್ಟ್ರೀಯ ಭದ್ರತಾ ಕಾನೂನನ್ನು ಹಿಂತೆಗೆದುಕೊಳ್ಳಬೇಕೆಂದು ಸಭೆ ಒತ್ತಾಯಿಸಿತು.

ಗ್ಯಾಂಗ್‌ಮನ್‌ಗಳನ್ನು ಮೇಲಧಿಕಾರಿಗಳು ಸ್ವಂತ ಕೆಲಸಗಳಿಗೆ ಬಳಸಿಕೊಳ್ಳಬಾರದೆಂದು ಪ್ರತಿಭಟನೆ ಸೂಚಿಸಲಾಯಿತು. ಮಾಲೀಕರ ಪರವಹಿಸಿ ಪೋಲೀಸರು ಕಾರ್ಮಿಕರಿಗೆ ಹೊಡೆಯುವುದನ್ನು ಸಭೆ ಖಂಡಿಸಿತು.

ಈ ವಿಶೇಷ ಸಭೆಯ ಅಧ್ಯಕ್ಷತೆಯನ್ನು ಶ್ರೀ ಮುತ್ತಪ್ಪ ವಹಿಸಿದ್ದರು. ಶ್ರೀ ಪ್ರಹ್ಲಾದಾಚಾರ್ ಅವರು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು.

ಹೋಟೆಲ್ ಕಾರ್ಮಿಕರ ಮೇಲೆ ದೌರ್ಜನ್ಯ

ಮೈಸೂರಿನ ನ್ಯೂ ಗಾಯತ್ರಿ ಭವನ ಹೋಟೆಲ್ ಕಾರ್ಮಿಕರು ಕಳೆದ 40 ದಿನಗಳಿಂದ ಅಕ್ರಮ ಬೀಗಮುದ್ರೆಯನ್ನು ವಿರೋಧಿಸಿ ಹೋರಾಟ ನಡೆಸುತ್ತಿದ್ದಾರೆ. ಶಾಂತಿಯುತ ಮುಷ್ಕರ ನಡೆಸುತ್ತಿದ್ದ ಕಾರ್ಮಿಕರನ್ನು ಪೋಲೀಸಿನವರು ವಿನಾಕಾರಣ ಬಂಧಿಸಿ ಕಾರ್ಮಿಕರ ಡೇರೆಯನ್ನು ಕಿತ್ತುಹಾಕಿದ ಘಟನೆ ವರದಿಯಾಗಿದೆ. ಕಾರ್ಮಿಕ ವಿವಾದದಲ್ಲಿ ಪೋಲೀಸಿನವರು ವಿನಾಕಾರಣ ಮಧ್ಯ ಪ್ರವೇಶಿಸಿದ್ದನ್ನು ಜಿಲ್ಲಾ ಹೋಟೆಲ್ ಕಾರ್ಮಿಕ ಸಂಘ ತೀವ್ರವಾಗಿ ಖಂಡಿಸಿದೆ.

ಬೀಗಮುದ್ರೆ ಹಾಕಿ, ಕಾರ್ಮಿಕರಿಗೆ ಕೆಲಸಕೊಡಲು ನಿರಾಕರಿಸುತ್ತಿರುವುದರ ವಿರುದ್ಧ ಹೋರಾಟ ಮಾಡುತ್ತಿರುವ ಕಾರ್ಮಿಕರಿಗೆ ಎಲ್ಲಾ ವಿಭಾಗದ ಕಾರ್ಮಿಕರು ಬೆಂಬಲ ಕೊಡಬೇಕೆಂದು ಸಂಘದ ಪ್ರಧಾನಕಾರ್ಯದರ್ಶಿ ಕಾಂ. ಮೋಹನ್‌ಕುಮಾರ್ ವಿನಂತಿಸಿಕೊಂಡಿದ್ದಾರೆ.

ಎಸ್.ಎಫ್.ಐ. ಹತ್ತನೇ ವಾರ್ಷಿಕೋತ್ಸವ ದಿನಾಚರಣೆ

1980ರ ಡಿಸೆಂಬರ್ 30ರಂದು ದೇಶದಾದ್ಯಂತ ಎಸ್.ಎಫ್.ಐ.ನ ಹತ್ತನೇ ವಾರ್ಷಿಕೋತ್ಸವ ದಿನಾಚರಣೆಯನ್ನು ಆಚರಿಸಲು ನೀಡಿರುವ ಕರೆಯ ಮೇರೆಗೆ ರಾಜ್ಯದ ಎಲ್ಲ ಎಸ್.ಎಫ್.ಐ. ಶಾಖೆಗಳು ಅಂದು ತಮ್ಮತಮ್ಮ ಶಾಲಾ-ಕಾಲೇಜುಗಳ ಆವರಣದಲ್ಲಿ ಅಥವಾ ಸಮೀಪದಲ್ಲಿ ಎಸ್.ಎಫ್.ಐ. ಧ್ವಜಾರೋಹಣ ಮಾಡುವ ಹೊಸ ಸಂಪ್ರದಾಯವನ್ನು ಪ್ರಾರಂಭಿಸಲಾಗುತ್ತದೆ. ಡಿ. 30 ರಂದು ರಜೆಯಿರುವುದರಿಂದ ಜನವರಿ 2ರಂದು ಶಾಲಾ-ಕಾಲೇಜುಗಳು ಪುನರಾರಂಭವಾಗುವ ದಿನವೇ ಎಲ್ಲ ಶಾಖೆಗಳು ಮೆರವಣಿಗೆ, ಸಭೆಗಳ ಮೂಲಕ ವಿದ್ಯಾರ್ಥಿಗಳ ನಡುವೆ ಎಸ್.ಎಫ್.ಐ.ನ ಹತ್ತು ವರ್ಷಗಳ ಸಾಧನೆ, ತ್ಯಾಗ, ಬಲಿದಾನಗಳ ಬಗ್ಗೆ ವ್ಯಾಪಕ ಪ್ರಚಾರ ನಡೆಸಲಾಗುವುದು.

ಹರಿಜನ-ಗಿರಿಜನ ಸಂಘದ ಸಭೆ

ದಿನಾಂಕ 7-12-80ರಂದು ದ. ಕ. ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ರಾಮಚಂದ್ರರವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ಜರುಗಿತು. ಈ ಸಭೆಗೆ ಕೊಕ್ಕಡದ ವಿವಿಧ ಭಾಗಗಳಿಂದ ಸುಮಾರು 500ಕ್ಕೂ ಹೆಚ್ಚು ದಲಿತರು ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ದಲಿತ ಸಂಘರ್ಷ ಸಮಿತಿಯ ಸಂಚಾಲಕರಾದ ಕಾಂ. ಬಿ. ರಾಮಕೃಷ್ಣನವರು ಆಗಮಿಸಿದ್ದರು.

ಕಾಂ. ರಾಮಕೃಷ್ಣನವರು ಮಾತನಾಡುತ್ತಾ ದೇಶದ ರಾಜಕೀಯ ವಿದ್ಯಮಾನಗಳನ್ನು ವಿಶ್ಲೇಷಿಸುತ್ತಾ ಜನರ ಬಡತನಕ್ಕೆ ಕಾರಣಗಳನ್ನು ವಿವರಿಸಿದರು. ದಲಿತರಿಗೆ ಸಾಮಾಜಿಕ ಸವಲತ್ತುಗಳು ದೊರೆಯಬೇಕಾದರೆ ಹೋರಾಟವೊಂದೇ ದಾರಿ ಎಂದು ತಿಳಿಸುತ್ತಾ ಶತಶತಮಾನಗಳಿಂದ ಶೋಷಕವರ್ಗ ಬೋಧಿಸಿಕೊಂಡು ಬಂದಿರುವ ಕರ್ಮಸಿದ್ಧಾಂತವನ್ನು ಕಿತ್ತೆಸೆಯಲೇಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ರಾಮಚಂದ್ರರವರು ಮಾತನಾಡುತ್ತಾ, ಹರಿಜನ-ಗಿರಿಜನರು ತಮ್ಮ ಹಕ್ಕುಗಳ ರಕ್ಷಣೆಗಾಗಿ ಸಂಘಟಿತರಾಗಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಕೊನೆಗೆ ಶ್ರೀ ವಿಠ್ಠಲ ಅವರು ಧನ್ಯವಾದಗಳನ್ನರ್ಪಿಸಿದರು.

ಜನವರಿಯಲ್ಲಿ ದ. ಕ. ಜಿಲ್ಲಾ ರೈತರ ಪ್ರದರ್ಶನ

ದ.ಕ. ಜಿಲ್ಲಾ ರೈತಸಂಘದ ಜಿಲ್ಲಾ ಸಮಿತಿಯು 18-12-80ರಂದು ಮಂಗಳೂರಿನಲ್ಲಿ ಕಾಂ. ಅಬ್ರಹಾಂ ಕರ್ಕಡ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಬರುವ ಜನವರಿ 13ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷ ಇವೆರಡರ ನೇತೃತ್ವದಲ್ಲಿರುವ ರೈತ ಸಂಘಗಳು ಸಂಯುಕ್ತವಾಗಿ ಮಂಗಳೂರಿನಲ್ಲಿ ರೈತರ ಹಾಗೂ ಕೃಷಿಕೂಲಿಗಾರರ ಮಹಾಪ್ರದರ್ಶನ ಹಾಗೂ ರ್‍ಯಾಲಿ ನಡೆಸಲಿದ್ದು, ಇದನ್ನು ಭಾರಿ ಯಶಸ್ವಿಗೊಳಿಸುವಂತೆ ಸಭೆ ಕರೆಕೊಟ್ಟಿದೆ.

ಇದರ ಸಿದ್ಧತೆಯ ಬಗ್ಗೆ ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಯು. ಜನಾರ್ಧನ ನಾಯಕ್ ಅವರು ವಿವರಿಸಿದರು. ಕೆ.ವಿ. ರಾವ್‌ಯಳಚಿತ್ತಾಯ, ಮೋನಪ್ಪ ಗೌಡ, ಟಿ.ಎಸ್. ಕೋಟ್ಯಾನ್, ಜಿ. ನಾರಾಯಣ, ಜೆ. ಕೃಷ್ಣಪ್ಪ ಇವರು ರೈತರನ್ನು ಇದಕ್ಕಾಗಿ ಸಂಘಟಿಸುವ ಬಗ್ಗೆ ಅಭಿಪ್ರಾಯಗಳನ್ನು ಸೂಚಿಸಿದರು. ಮಾರ್ಕ್ಸ್‌ವಾದಿ ಪಕ್ಷದ ದ.ಕ. ಜಿಲ್ಲಾ ಕಾರ್ಯದರ್ಶಿ ಕಾಂ. ಕೆ.ಆರ್. ಶ್ರೀಯಾನ್ ಅವರು ಮಾತನಾಡಿ ರೈತರ ಸಂಯುಕ್ತ ಪ್ರದರ್ಶನದಲ್ಲಿ ಸಂಘಟಿತ ಕಾರ್ಮಿಕರೂ ಭಾಗವಹಿಸುವರು ಎಂದು ಹೇಳಿದರು.

ಚಿಕ್ಕಮಗಳೂರು :

ರಾಜ್ಯದ ಪ್ಲಾಂಟೇಷನ್ ಕಾರ್ಮಿಕರು ಹೋರಾಟದ ಹಾದಿಯಲ್ಲಿ

ತೋಟ ಕಾರ್ಮಿಕರ ಸಂಬಳದ ಬಗ್ಗೆ 21-9-1979ರಂದು ಬೆಂಗಳೂರಿನಲ್ಲಿ ಆದ ತ್ರಿಪಕ್ಷೀಯ ಒಪ್ಪಂದದ ಪ್ರಕಾರ ಇಂದು ತೋಟಕಾರ್ಮಿಕರಿಗೆ ದಿನಕ್ಕೆ ರೂ.7.25 ಮಾತ್ರ ಸಿಕ್ಕುತ್ತಿದೆ. ಈ ವರ್ಷದ ಪ್ರಾರಂಭದಿಂದ ಆದ ಬೆಲೆಏರಿಕೆಯು ತೋಟ ಕಾರ್ಮಿಕರ ಕೊಳ್ಳುವಶಕ್ತಿಯನ್ನು ತೀವ್ರವಾಗಿ ಕುಂದಿಸಿದೆ. ಕೇರಳದಲ್ಲಿ ಇಂದು ಕಾಫಿತೋಟದ ಕೆಲಸಗಾರರಿಗೆ ದಿನಕ್ಕೆ ರೂ.9.97 ಸಿಕ್ಕುತ್ತಿದೆ. ತಮಿಳುನಾಡಿನಲ್ಲಿ 14-12-1980ರ ವರೆಗೆ ದಿನಕ್ಕೆ ರೂ 8.52 ಸಿಕ್ಕುತ್ತಿದ್ದು ಆ ರಾಜ್ಯದ ತೋಟಕಾರ್ಮಿಕರು 15-12-1980 ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ಹೂಡಿದ್ದಾರೆ. ತಮಿಳುನಾಡಿನ ಕಾರ್ಮಿಕಸಚಿವ ರಾಘವಾನಂದಂ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿ ಮುಷ್ಕರವನ್ನು ಕೊನೆಗೊಳಿಸಲು ಕೊಯಮುತ್ತೂರಿನಲ್ಲಿ 19ರಿಂದ ತೋಟಮಾಲೀಕರ ಮತ್ತು ತೋಟಕಾರ್ಮಿಕರ ಪ್ರತಿನಿಧಿಗಳೊಂದಿಗೆ ಸಂಧಾನ ನಡೆಸುತ್ತಿದ್ದಾರೆ

ಈ ಹಿನ್ನೆಲೆಯಲ್ಲಿ ಪ್ಲಾಂಟೇಷನ್ ಕೈಗಾರಿಕೆಯಲ್ಲಿರುವ ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಐ.ಎನ್.ಟಿ.ಯು.ಸಿ., ಎ.ಐ.ಎ.ಡಿ.ಎಂ.ಕೆಗೆ ಸೇರಿದ ಮತ್ತು ಇತರ ಕಾರ್ಮಿಕಸಂಘಗಳ ಜಂಟಿಸಭೆಯು 19-12-1980ರಂದು ಚಿಕ್ಕಮಗಳೂರಿನಲ್ಲಿ ನಡೆದು ಹಲವು ಮಹತ್ವದ ತೀರ್ಮಾನಗಳನ್ನು ಮಾಡಿದೆ.

ಅನಿರ್ದಿಷ್ಟಕಾಲದ ಮುಷ್ಕರ ನಡೆಸುತ್ತಿರುವ ತಮಿಳುನಾಡಿನ ತೋಟ ಕಾರ್ಮಿಕರನ್ನು ಅಭಿನಂದಿಸಿ ಅವರಿಗೆ ಹೃತ್ಪೂರ್ವಕ ಬೆಂಬಲವನ್ನು ಸೂಚಿಸುವ ನಿರ್ಣಯವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

21-9-1979ರ ಸಂಬಳದ ಒಪ್ಪಂದವನ್ನು ತಾ 1-1-1981ರಿಂದ ರದ್ದುಮಾಡಿ ಅದೇದಿವಸದಿಂದ ಕಾಫಿ, ಟೀ, ಏಲಕ್ಕಿ ಮತ್ತು ಮಿಶ್ರತೋಟಗಳಲ್ಲಿ ಕೆಲಸಮಾಡುವ ಕಾರ್ಮಿಕರಿಗೆ ದಿನಕ್ಕೆ ರೂ. 12, ರಬರ್‌ತೋಟದ ಕಾರ್ಮಿಕರಿಗೆ ದಿನಕ್ಕೆ ರೂ.13 ನ್ನು ಸಂಬಳವನ್ನಾಗಿ ಕೇಳುವ ಮತ್ತು ಇತರ ಬೇಡಿಕೆಗಳ ಪಟ್ಟಿಯನ್ನು ತೋಟಮಾಲೀಕರ ಮುಂದಿಡಲು ಸಭೆಯು ಸರ್ವಾನುಮತದಿಂದ ತೀರ್ಮಾನ ಮಾಡಿತು.

ನೆರೆಯ ರಾಜ್ಯಗಳಲ್ಲಿ ಪ್ರಚಲಿತವಿರುವ ತೋಟಕಾರ್ಮಿಕರ ಕೂಲಿಯನ್ನು ನಮ್ಮ ರಾಜ್ಯದ ತೋಟ ಕಾರ್ಮಿಕರ ಕನಿಷ್ಠ ಕೂಲಿಯನ್ನಾಗಿ ನಿರ್ಣಯಿಸಿ ಪ್ರಕಟಿಸಬೇಕೆಂದು ಕೇಳುವ ಮನವಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಲು, ಸರ್ಕಾರದ ಕನಿಷ್ಠ ಕೂಲಿಯ ಸಲಹಾಮಂಡಳಿಯಲ್ಲಿರುವ ಕಾರ್ಮಿಕ ಪ್ರತಿನಿಧಿಗಳಿಗೆ ಮನವಿಗಳನ್ನು ಕೊಡಲು ಸಭೆಯು ಸರ್ವಾನುಮತದಿಂದ ನಿರ್ಧರಿಸಿತು.

ಈ ಬೇಡಿಕೆಗಳಿಗಾಗಿ 1981ರ ಜನವರಿಯ 20ರಂದು ಒಂದು ದಿವಸದ ಸಾಂಕೇತಿಕ ಮುಷ್ಕರಕ್ಕೆ ಕರೆಕೊಡಲು, ಫೆಬ್ರವರಿ 2ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸಲು ಸಭೆಯು ಅವಿರೋಧವಾಗಿ ನಿರ್ಧರಿಸಿತು.

ಎಲ್ಲಾ ತೋಟ ಕಾರ್ಮಿಕ ಸಂಘಗಳ ಪ್ರತಿನಿಧಿಗಳ ಜಂಟಿ ಸಭೆಯನ್ನು 31-12-1980ರಂದು ಹಾಸನದಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಈ ಸಭೆಯಲ್ಲಿ ಒಂದು ಕ್ರಿಯಾಸಮಿತಿಯನ್ನು ರಚಿಸಲಾಗುವುದು.

ಬೀಡಿ ಕಾರ್ಮಿಕರ ಮುಷ್ಕರ

ರಾಜ್ಯದ ಬೀಡಿ ಕಾರ್ಮಿಕರ ಫೆಡರೇಷನ್ ಕೊಟ್ಟಿದ್ದ ಕರೆಯ ಮೇರೆಗೆ 17-12-80ರಂದು ಅನೇಕ ಊರುಗಳಲ್ಲಿ ಬೀಡಿಕಾರ್ಮಿಕರ ಮುಷ್ಕರ ನಡೆಯಿತು. ಕುಣಿಗಲ್‌ನ ಬೀಡಿ ಕಾರ್ಮಿಕರು ಫ್ಯಾಕ್ಟರಿಗಳಿಗೆ ಬೀಡಿಯನ್ನು ತೆಗೆದುಕೊಂಡು ಹೋಗದೆ, ಕೆಂಬಾವುಟ ಹಿಡಿದು ಮೆರವಣಿಗೆ ನಡೆಸಿದರು. ತಾಲ್ಲೂಕು ಕಚೇರಿಯ ಮುಂದೆ ನಡೆದ ಸಭೆಯಲ್ಲಿ ಬೀಡಿ ಕಾರ್ಮಿಕರ ಸಮಸ್ಯೆಗಳನ್ನು ಕುರಿತು ಕಾಂ. ಬಡೇಸಾಬ್, ಯೂನೂಸ್‌ಖಾನ್, ಅಂಜಪ್ಪ ಅವರು ಮಾತನಾಡಿದರು. ವಸತಿಹೀನರು ತಾಲ್ಲೂಕು ಕಚೇರಿಯ ಮುಂದೆ 25 ದಿನಗಳಿಂದಲೂ ನಡೆಸುತ್ತಿರುವ ಉಪವಾಸ ಸತ್ಯಾಗ್ರಹಕ್ಕೆ ಸರ್ಕಾರ ಮಣಿದು ಅವರ ಬೇಡಿಕೆಯನ್ನು ಈಡೇರಿಸಬೇಕೆಂದು ಒತ್ತಾಯಿಸಲಾಯಿತು.

ಚಾಮರಾಜನಗರದಲ್ಲಿ ಒಂದು ವಾರದ ಹಿಂದಿನಿಂದಲೂ ಪ್ರಚಾರ ನಡೆದಿದ್ದು 17-12-80ರಂದು ಮುಷ್ಕರ ನಡೆಯಿತು.

ಕಾಮ್ರೇಡ್ ಎಂ. ಎಚ್. ಉಗ್ರಪ್ಪ, ಸತ್ತಾರ್, ಜಮೀಲ್, ರಂಗಸ್ವಾಮಿ ಮೊದಲಾದವರು ಈ ಬೀಡಿ ಕಾರ್ಮಿಕರ ಮುಷ್ಕರದ ನೇತೃತ್ವವಹಿಸಿದ್ದರು. ಕಾಂ. ಉಗ್ರಪ್ಪನವರು ಮುಷ್ಕರದ ಪ್ರಾಮುಖ್ಯವನ್ನು ವಿವರಿಸಿದರು.

ಗುಂಡ್ಲುಪೇಟೆಯಲ್ಲಿ ಬೀಡಿ ಕಾರ್ಮಿಕರು ತಮ್ಮ ಸಂಘಟನಾ ಸಾಮರ್ಥ್ಯವನ್ನು ಅಂದು ಪ್ರದರ್ಶಿಸಿದರು. ಮುಖ್ಯ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಬೀಡಿ ಫ್ಯಾಕ್ಟರಿಯ ಮುಂದೆ ಪ್ರದರ್ಶನ ನಡೆಸಿದರು. ಮಹಿಳೆಯರೂ ಇದರಲ್ಲಿ ಭಾಗವಹಿಸಿದ್ದರು. ಮುಷ್ಕರದ ಮುಖಂಡತ್ವವನ್ನು ಕಾಂ. ಶೇಖರ್, ಗೋಪಾಲ್, ಚಿಕ್ಕಮಾರ ನಾಯ್ಕಸ್ವಾಮಿ, ಚಿನ್ನನಾಯ್ಕ ಅವರು ವಹಿಸಿದ್ದರು.

ಮೈಸೂರಿನಲ್ಲೂ ಬೀಡಿ ಕಾರ್ಮಿಕರ ಯಶಸ್ವಿ ಮುಷ್ಕರ ನಡೆಯಿತು. ನಂತರದ ಬಹಿರಂಗ ಸಭೆಯಲ್ಲಿ ಏಟಕ್‌ನ ಸೋಮಸುಂದರಶರ್ಮ, ರಹಮಾನ್, ಸಿ.ಐ.ಟಿ.ಯು.ನ ಎಂ.ಎನ್. ಉಗ್ರಪ್ಪ, ಸಿ. ಕೆ. ಮೋನ್, ಬೀಡಿ ಮಜ್ದೂರ್ ಸಂಘದ ಬಷೀರ್ ಮುಂತಾದವರು ಮಾತನಾಡಿದರು, ಸಭೆಯ ಅಧ್ಯಕ್ಷತೆಯನ್ನು ಪೀರ್‌ಖಾನ್ ವಹಿಸಿದ್ದರು.

ತುಮಕೂರಿನ ಕಾರ್ಮಿಕರು ತಮ್ಮ ಬೇಡಿಕೆಗಳ ಒತ್ತಾಯಕ್ಕಾಗಿ 17-12-80ರಂದು ಮುಷ್ಕರ ನಡೆಸಿದರು. ಗಣೇಶ ಬೀಡಿಯ ಅಂಗಸಂಸ್ಥೆಯಾದ ಜ್ಯೋತಿ ಹೋಂ ಇಂಡಸ್ಟ್ರೀಸ್‌ನ ಆವರಣದಲ್ಲಿ ಕೂತು ಕಾರ್ಮಿಕರು ಮುಷ್ಕರ ನಡೆಸಿದರು. ಮಹಿಳೆಯರು ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾಂ. ಮಹಮ್ಮದ್ ದಸ್ತಗೀರ್, ಹಾಜರಾಂಬಿ, ಸಯ್ಯದ್ ಅನ್ವರ್, ವಜೀರ್, ಅಯಾತ್, ಮಲ್ಲಯ್ಯ ಇವರು ಮುಷ್ಕರದಲ್ಲಿ ಭಾಗವಹಿಸಿದ್ದರು.

●

ಅಧಿಕಾರಿಯಿಂದ ಒಪ್ಪಂದದ ಅನಧಿಕೃತ ಬದಲಾವಣೆ

ಬೆಳಗಾವಿಯ ಇಂಡಿಯನ್ ಅಲ್ಯೂಮಿನಿಯಂ ಕಂಪೆನಿಯ ವರ್ಕರ್ಸ್ ಯೂನಿಯನ್ ಮತ್ತು ಆಡಳಿತವರ್ಗದ ನಡುವೆ ಕೈಗಾರಿಕಾ ವಿವಾದ ಮಸೂದೆಯ 12(3)ನೇ ವರ್ಗದ ಪ್ರಕಾರ ಒಪ್ಪಂದವೊಂದು 4-8-1980ರಂದು ಆಗಿತ್ತು. ಶ್ರೀ ಇಬ್ರಾಹಿಂ ಅವರ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಆಗಿತ್ತು. ಈ ಒಪ್ಪಂದದ ಮೂಲ ಪ್ರತಿಯನ್ನು ಜಂಟಿ ಲೇಬರ್ ಕಮೀಷನರ್ ಆದ ಶ್ರೀ ಪಿ. ಜಿ. ನಾಯಕ್ ಅವರು ಇಟ್ಟುಕೊಂಡು ಮಿಕ್ಕ ನಮಗೆ ಕರಡು ಪ್ರತಿಗಳನ್ನು ಕೊಟ್ಟರು. ಆದರೆ ನಾಯಕ್ ಅವರು ಒಪ್ಪಂದದ ಮೊದಲನೇ ಪ್ಯಾರಾದಲ್ಲಿ ಸ್ವಂತವಾಗಿ ಬದಲಾವಣೆಗಳನ್ನು ಮಾಡಿದ್ದಾರೆ. (ಇದಕ್ಕೆ ಮೊದಲು ಇಂಡಾಲ್ ಆಡಳಿತದಿಂದ ಅವರಿಗೆ ಪತ್ರವೊಂದು ಹೋಗಿತ್ತು) ಇದು ಸಾರ್ವಜನಿಕ ದಾಖಲೆಯ ಫೋರ್ಜರಿಯಾಗಿದೆ. ಇದು ಅಪರಾಧವಾದುದರಿಂದ ಸರ್ಕಾರವು ತನಿಖೆ ನಡೆಸಬೇಕೆಂದು ಇಂಡಾಲ್ ವರ್ಕರ್ಸ್ ಯೂನಿಯನ್‌ನ ಅಧ್ಯಕ್ಷರಾದ ಕಾಂ. ಆರ್ ಜಿ ಸ್ಥಳೇಕರ್ ಅವರು ಲೇಬರ್ ಕಮೀಷನರಿಗೆ ಒತ್ತಾಯಿಸಿದರು.

●

ಬಲಿಷ್ಟ ಸಂಘಟನೆಗೆ ಪ್ಲೀನಮ್ ನಾಂದಿಯಾಗಲಿ

(ಒಂದನೇ ಪುಟದಿಂದ)

“ಈ ಧ್ಯೇಯಸಾಧನೆಗೆ ಮೊದಲು ನಮ್ಮ ಪಕ್ಷವನ್ನು ಬಲಿಷ್ಟಪಡಿಸುವ ಅಗತ್ಯವಿದೆ, ಹೀಗೆಂದು ಕಲಸುಮೇಲೋಗರವಾದಿ ಪಕ್ಷವನ್ನು ಬೆಳೆಸುವುದಲ್ಲ, ಬದಲು ಶಿಸ್ತುಬದ್ಧವಾದ, ಮಾರ್ಕ್ಸ್-ಲೆನಿನ್ ತತ್ವಗಳ ಆಧಾರದ ಮೇಲೆ ಕ್ರಾಂತಿಕಾರೀ ಪಕ್ಷ ಕಟ್ಟಬೇಕು, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಕ್ರೋಢೀಕರಣಕ್ಕೆ ಶ್ರಮಿಸಬೇಕು.”

ಮಲಪ್ರಭಾ ರೈತಹೋರಾಟವನ್ನು ಪ್ರಸ್ತಾಪಿಸುತ್ತಾ “ಇಂಥ ಹೋರಾಟಗಳಿಂದ ಸ್ಫೂರ್ತಿಪಡೆದು ಹೋರಾಟಗಳ ಅನುಭವಗಳಿಂದ ಶಕ್ತಿಶಾಲಿ ಸಂಘಟನೆಗೆ ಯತ್ನಿಸಬೇಕು. ಇಂಥ ಪ್ರಯತ್ನಗಳಿಗೆ ಪ್ಲೀನಮ್ ನಾಂದಿಯಾಗಲಿ.”

○

ಕಾಂ. ಕೊಸಿಗಿನ್ ನಿಧನ

ಸೋವಿಯತ್ ಯೂನಿಯನ್ನಿನ ಕಮ್ಯುನಿಸ್ಟ್ ಪಕ್ಷದ ಖ್ಯಾತಧುರೀಣ, ಸೋವಿಯತ್ ಜನತೆಯ ಅಪ್ರತಿಮ ಧುರೀಣ ಕಾಂ. ಅಲೆಕ್ಸಿ ಕೊಸಿಗಿನ್‌ರು ದಿನಾಂಕ 18 ರಂದು ನಿಧನರಾದ ದುಃಖಕರ ವಾರ್ತೆ ಬಂದಿದೆ.

ಕಮ್ಯುನಿಸ್ಟ್ ಪಕ್ಷ (ಸಿಪಿಎಸ್‌ಯು)ದ ಪಾಲಿಟ್‌ಬ್ಯೂರೋ ಸದಸ್ಯರಾಗಿ ಅನೇಕ ವರ್ಷಗಳ ಕಾಲ ಕಾರ್ಯನಿರ್ವಹಿಸಿದ ಕಾಂ. ಕೊಸಿಗಿನ್‌ರು, ಫ್ಯಾಸಿಸಂ ವಿರೋಧಿ ಯುದ್ಧಕಾಲದಲ್ಲಿ, ಯುದ್ಧಾನಂತರ ಆರ್ಥಿಕ ಸಂಕಷ್ಟದ ಕಾಲದಲ್ಲಿ ತಮ್ಮ ಹೊಣೆಗಾರಿಕೆಯನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ್ದರು. ವಿಶ್ವದಲ್ಲಿ ಶಾಂತಿ ಕಾಪಾಡುವಲ್ಲಿ, ಶಸ್ತ್ರಾಸ್ತ್ರಗಳ ಪೈಪೋಟಿ ತಡೆಯುವಲ್ಲಿ ಕೊಸಿಗಿನ್‌ರ ಪಾತ್ರ ಅವಿಸ್ಮರಣೀಯ, ಭಾರತ-ಪಾಕಿಸ್ತಾನ ಮಧ್ಯೆ ವಿರಸವುಂಟಾದಾಗ ತಾಷ್ಕೆಂಟನಲ್ಲಿ ಸಂಧಾನ ರೂಪಿಸಿದ ಶಿಲ್ಪಿಯಾಗಿದ್ದರು. ಇವರ ನೇತೃತ್ವದಲ್ಲಿ, ಸೋವಿಯತ್ ನಾಡಿನ ಆರ್ಥಿಕ ಪರಿಸ್ಥಿತಿ ಗಣನೀಯವಾಗಿ ಪ್ರಗತಿಯಾಯಿತು. 1978ರಲ್ಲಿ ಭಾರತಕ್ಕೆ ಕೊಸಿಗಿನ್‌ರ ಭೇಟಿಯಿಂದಾಗಿ ಭಾರತ-ಸೋವಿಯತ್ ಮೈತ್ರಿ ಮತ್ತಷ್ಟು ಬಲಿಷ್ಟವಾಯಿತು.

ಜಾಗತಿಕ ಶಾಂತಿಗಾಗಿ ಮಹತ್ತರ ಪಾತ್ರವಹಿಸಿದ್ದ ಕಾಂ. ಕೊಸಿಗಿನ್‌ರ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ತನ್ನ ಶೋಕವನ್ನು ವ್ಯಕ್ತಪಡಿಸಿದೆ. ಸೋವಿಯತ್ ಕಮ್ಯುನಿಸ್ಟ್ ಪಕ್ಷದ, ಸೋವಿಯತ್ ನಾಡಿನ ಜನತೆಯ ದುಃಖದಲ್ಲಿ ಪಾಲ್ಗೊಂಡಿದೆ.

○

ದಾಳಿಯ ಖಂಡನೆ ಪರಿಹಾರಕ್ಕಾಗಿ ಒತ್ತಾಯ

ಹರಿಜನ-ಗಿರಿಜನರು ಕಟ್ಟಿಕೊಂಡಿದ್ದ ಗುಡಿಸಲುಗಳನ್ನು ಬೆಂಕಿಇಟ್ಟು, ಗುಡಿಸಲುಗಳಲ್ಲಿದ್ದ ಮಹಿಳೆಯರನ್ನು ಥಳಿಸಿ ಸಿಕ್ಕಿದ್ದನ್ನು ಹೊತ್ತುಕೊಂಡು ಹೋಗಿರುವ ಘಟನೆಯನ್ನು ಕೋಲಾರ ಜಿಲ್ಲಾ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ದೊರೆಸ್ವಾಮಿಯವರು ಉಗ್ರವಾಗಿ ಖಂಡಿಸಿದ್ದಾರೆ.

ಈ ಅಮಾನುಷ ಕೃತ್ಯದಿಂದ ಸಂಕಷ್ಟಕ್ಕೀಡಾದ ಅಮಾಯಕ ಜನರಿಗೆ ಕೂಡಲೇ ವಾಸಕ್ಕೆ ಅವಕಾಶ ಕಲ್ಪಿಸಿ, ಪರಿಹಾರ ಕೊಡುವುದರೊಟ್ಟಿಗೇ, ಘಟನೆಗೆ ಕಾರಣರಾಗಿರುವ ಬೈಯಾರೆಡ್ಡಿ ಮತ್ತವನ ಗೂಂಡಾಗಳನ್ನು ಕೂಡಲೇ ಬಂಧಿಸಬೇಕೆಂದು ಸರಕಾರವನ್ನು ಒತ್ತಾಯಿಸಿದ್ದಾರೆ.

●

ದಾಳಿ-ದಬ್ಬಾಳಿಕೆಯ ಖಂಡನೆ

ಡಿಸೆಂಬರ್ 12ರಂದು ಬೆಂಗಳೂರಿನಲ್ಲಿ ನಡೆದ ರೈತ-ಕಾರ್ಮಿಕರ ಬೃಹತ್ ಮತಪ್ರದರ್ಶನದಲ್ಲಿ ಪಾಲ್ಗೊಂಡಿದ್ದಕ್ಕಾಗಿ ರೈತರ ಮೇಲೆ, ಕಾರ್ಮಿಕರ ಮೇಲೆ ಧಾಳಿ-ದಬ್ಬಾಳಿಕೆಯಾಗುತ್ತಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರೆಟೇರಿಯೆಟ್ ಸದಸ್ಯರಾದ ಕಾಂ. ವಿ.ಜೆ.ಕೆ. ನಾಯರ್ ಮತ್ತು ಕಾಂ. ಸಿ. ನಂಜುಂಡಪ್ಪ ಇವರುಗಳು ಉಗ್ರವಾಗಿ ಖಂಡಿಸಿದ್ದಾರೆ.

ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದಕ್ಕಾಗಿ ಮೈಕೋ ಆಡಳಿತವರ್ಗ ಕಾರ್ಮಿಕರ 8 ದಿನಗಳ ಸಂಬಳ ಕಡಿತಮಾಡಲು ನಿರ್ಧರಿಸಿದೆ, ಅಲ್ಲದೇ 10 ಕಾರ್ಮಿಕರನ್ನು ಕೆಲಸದಿಂದ ಸಸ್ಪೆಂಡ್ ಮಾಡಿದೆ, ವೈಟ್‌ಫೀಲ್ಡನಲ್ಲಿರುವ “ವಿರಾಯು” ಫ್ಯಾಕ್ಟರಿಯಲ್ಲಿ ಯೂನಿಯನ್ನಿನ ಮಾನ್ಯತೆಯನ್ನು ರದ್ದುಪಡಿಸಿರುವುದಲ್ಲದೇ 8 ದಿನಗಳ ಸಂಬಳ ಕಡಿತ ಮಾಡಿಕೊಂಡಿದೆ. ಇದೇ ರೀತಿ ಯಶವಂತಪುರದಲ್ಲಿರುವ ಇಂಟರ್‌ಕಾನ್ ಫ್ಯಾಕ್ಟರಿಯಲ್ಲಿ 4ಜನ ಕಾರ್ಮಿಕರನ್ನು ವಜಾಮಾಡಿ, 4 ಜನರನ್ನು ಸಸ್ಪೆಂಡ್ ಮಾಡಲಾಗಿದೆ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಅಡ್ಡಗಲ್ ಅರಣ್ಯ ಪ್ರದೇಶದಲ್ಲಿ ಕೃಷಿಕೂಲಿಕಾರ ಗುಡಿಸಲುಗಳನ್ನು ನಾಶಪಡಿಸಲಾಗಿದೆ.

ಪ್ರತಿಗಾಮಿ ಶಕ್ತಿಗಳು ರೈತಕಾರ್ಮಿಕರ ಪ್ರಜಾಪ್ರಭುತ್ವ ಹಕ್ಕುಗಳನ್ನು ಮಾನ್ಯಮಾಡದಿದ್ದರೆ ಹೋರಾಟಕ್ಕಿಳಿಯಬೇಕಾದೀತೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎಚ್ಚರಿಕೆ ನೀಡಿದೆ.

○

ಎಸ್.ಎಫ್.ಐ. ಪದಾಧಿಕಾರಿಗಳು

ದೊಡ್ಡಬಳ್ಳಾಪುರದ ಕೊಂಗಾಡಿಯಪ್ಪ ಕಾಲೇಜಿನ ಎಸ್.ಎಫ್.ಐ. ಸಂಚಾಲಕರಾಗಿ ಎ. ವೆಂಕಟಸ್ವಾಮಿ, ಸಹಸಂಚಾಲಕರಾಗಿ ಎಂ. ಅಂಜನಪ್ಪ ನೇಮಕವಾಗಿದ್ದಾರೆ. ಇಲ್ಲಿನ ಸರ್ಕಾರಿ ಜ್ಯೂನಿಯರ್ ಕಾಲೇಜಿನ ಸಂಚಾಲಕರಾಗಿ ಮುನೀಂದ್ರಬಾಬು, ಸಹಸಂಚಾಲಕರಾಗಿ ನಾರಾಯಣಸ್ವಾಮಿ ನೇಮಕವಾಗಿದ್ದಾರೆ.

●

ಪುತ್ತೂರು ತಾಲ್ಲೂಕಿನಲ್ಲಿ ಡಿ. ವೈ. ಒ. ಸಭೆ

ದ. ಕ. ಜಿಲ್ಲೆಯ ಪುತ್ತೂರಿನ ನೆಲ್ಯಾಡಿಯಲ್ಲಿ ಯುವಜನ ಸಂಘಟನೆಯ ಸಭೆ ಜರುಗಿತು. ಸಭೆಯ ಅಧ್ಯಕ್ಷತೆಯನ್ನು ಜೋಯರ್ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬಿ ರಾಮಕೃಷ್ಣ ಮತ್ತು ವಿಲ್‌ಫ್ರೆಡ್ ಆಗಮಿಸಿದ್ದರು.

○

ಕುಣಿಗಲ್‌ನಲ್ಲಿ ಎಸ್.ಎಫ್.ಐ. ಸಮಿತಿ ರಚನೆ

16-12-80ರಂದು ಕುಣಿಗಲ್‌ನಲ್ಲಿ ಎಸ್.ಎಫ್.ಐ. ಕಾರ್ಯಕಾರಿ ಸಮಿತಿ ಸಭೆ ನಡೆಯಿತು. ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಕಾಂ. ಬಿ.ಜಿ. ಗಂಗಾಧರಯ್ಯ ಅವರು ಅಧ್ಯಕ್ಷರಾಗಿರುವಂತೆ ಎಸ್.ಎಫ್.ಐ ಸಮಿತಿ ರಚಿತವಾಯಿತು. ಕಾರ್ಯದರ್ಶಿಯಾಗಿ ಹೆಚ್.ಕೆ. ಚಿಕ್ಕರಾಮಯ್ಯ, ಉಪಾಧ್ಯಕ್ಷರಾಗಿ ಏಸುದಾಸ್ ಮತ್ತು ಚಿಕ್ಕಬೈರಯ್ಯ ಅವರನ್ನು ಸಹ ಕಾರ್ಯದರ್ಶಿಗಳಾಗಿ ಎಸ್.ಜಿ ಶಿವಣ್ಣ ಮತ್ತು ಎನ್.ಆರ್. ಲಕ್ಷ್ಮೀನಾರಾಯಣ, ಖಜಾಂಚಿಯಾಗಿ ಎನ್. ನಾಗರಾಜು ಅವರನ್ನು ಆಯ್ಕೆ ಮಾಡಲಾಯಿತು. ವಿಶೇಷ ಆಹ್ವಾನಿತರಾಗಿದ್ದ ಬೆಂಗಳೂರು ಜಿಲ್ಲಾ ಎಸ್. ಎಫ್. ಐ. ಕಾರ್ಯದರ್ಶಿ ಕಾಂ. ಗೋಪಾಲಕೃಷ್ಣ ಅವರು ಸಂಘಟನೆಯನ್ನು ಬಲಪಡಿಸಲು ಕರೆಕೊಟ್ಟರು.

○

ಎಸ್.ಎಫ್.ಐ. ಉದ್ಘಾಟನೆ

ಕೋಲಾರ ಜಿಲ್ಲೆ ಮುಳಬಾಗಿಲಿನ ಎಂ. ಇ. ಎಸ್. ಕಾಲೇಜಿನಲ್ಲಿ 17-12-1980ರಂದು ಎಸ್.ಎಫ್. ಐ. ಉದ್ಘಾಟನೆ ನಡೆಯಿತು. ಮುಖ್ಯ ಅತಿಥಿಯಾಗಿ ಶಾಂತರೇಣುಕಾರಾಧ್ಯ ಅವರು ಆಗಮಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಅಬ್ದುಲ್ ಗಫಾರ್ ಅವರು ವಹಿಸಿದ್ದರು. ಖ್ಯಾತ ವಕೀಲರಾದ ಶ್ರೀ ಆರ್. ವೆಂಕಟರಾಮಯ್ಯ ಅವರು ಸಭೆಯಲ್ಲಿ ಭಾಷಣ ಮಾಡಿದರು.

●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT